ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂಪುಟ 15 ಸಂಚಿಕೆ 9 ಸೆಪ್ಟಂಬರ್ 2018 ರೂ.25

## ಅನಿಸಿಕೆಗಳು

### ಗುರೂಜಿ ಕೃಷ್ಣಾನಂದ

**ಅನು: ಚಂಪಾ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಸೆಪ್ಟೆಂಬರ್ 1993ರ ಸಂಚಿಕೆ)

ಶಾಂತಿ ಮತ್ತು ಸಾಮರಸ್ಯವನ್ನು ಹುಟ್ಟುಹಾಕುವುದಕ್ಕಾಗಿ ಜನಗಳ ಸಂಘವನ್ನು ಕಟ್ಟುವ ವಿಷಯವಾಗಿ ಒಂದು ಮೀಟಿಂಗ್‌ನಲ್ಲಿ ಚರ್ಚಿಸಲು ನನಗೆ ಆಹ್ವಾನ ಬಂದಿತ್ತು. ತಡವಾಗಿಯಾದರೂ ಇಂತಹ ಒಂದು ಪ್ರಯತ್ನ ನಡೆಯುತ್ತಿದೆ ಎಂಬ ಕಾರಣಕ್ಕಾಗಿ ನನಗೆ ಬಹಳ ಸಂತೋಷವಾಯಿತು. ಈ ನಿಟ್ಟಿನಲ್ಲಿ ಕೆಲಸ ಮಾಡಲು ನಾವು ಈಗಾಗಲೇ ಹಲವಾರು ಅಂತರರಾಷ್ಟ್ರೀಯ ಸಮೂಹಗಳೊಂದಿಗೆ ಸಂಪರ್ಕದಲ್ಲಿದ್ದೇವೆ. ನಮ್ಮ ಕೆಲಸವು ಜನರ ಗಮನಕ್ಕೆ ಬಂದಿಲ್ಲ, ಏಕೆಂದರೆ ಸಮೂಹ ಮಾಧ್ಯಮಗಳು ರಾಜಕಾರಣ ಮತ್ತು ಉದ್ರೇಕಕಾರೀ ವಿಷಯಗಳ ಹಿಂದೆ ಹೋಗುತ್ತವೆ. ಪ್ರಪಂಚದ ಎಲ್ಲ ಭಾಗಗಳಲ್ಲಿ ಶಾಂತಿ ಮತ್ತು ವಿವೇಕಕ್ಕಾಗಿ ಜನ್ಮತಳೆದ ಕ್ರಾಂತಿಯನ್ನು ಗಮನಿಸುವಲ್ಲಿ ಅವು ವಿಫಲವಾಗಿವೆ. ಎಲ್ಲ ಕ್ರಾಂತಿಗಳಂತೆ ಇದೂ ಕೂಡ ವೈಯಕ್ತಿಕ ಮಟ್ಟದಲ್ಲಿ ಒಂದೇ ಸಮನೆ ಬೆಳೆಯುತ್ತಿದೆ.

ನಾವು ಈ ಭೂಮಿಯ ಮೇಲೆ ಬದುಕಿರಬೇಕೆಂದರೆ ಶಾಂತಿ ಇರಲೇಬೇಕು. ಸಮೃದ್ಧಿ, ಪ್ರಗತಿ ಮುಂತಾದುವೆಲ್ಲ ಬರುವುದು ಶಾಂತಿ ಬಂದ ಮೇಲೆ ಮಾತ್ರ ಎಂದು ವಿವೇಚನೆಯುಳ್ಳ ಯಾವುದೇ ವ್ಯಕ್ತಿಯು ಅರ್ಥಮಾಡಿಕೊಳ್ಳುತ್ತಾನೆ. ನಮ್ಮಲ್ಲಿರುವ ನಕಾರಾತ್ಮಕತೆಗಳನ್ನು ತೊಡೆದು ಹಾಕಿದ ಮೇಲೆ ಮಾತ್ರ ಶಾಂತಿ ಉಂಟಾಗುತ್ತದೆ. ಪರಿಶುದ್ಧತೆಯು ಶಾಂತಿಯನ್ನು ತರುತ್ತದೆ. ಆದ್ದರಿಂದಲೇ ಮೊದಲು ನಾವು ನಮ್ಮನ್ನು ಆಧ್ಯಾತ್ಮಿಕವಾಗಿಸಿಕೊಳ್ಳಬೇಕು. ಅದಕ್ಕಾಗಿ ನಾವು ಧ್ಯಾನ ಮಾಡುತ್ತೇವೆ. ಶುದ್ಧೀಕರಣ, ಶಾಂತಿಯನ್ನು ಹುಟ್ಟುಹಾಕುವುದು ಹಾಗೂ ಅದರ ಸ್ಪಂದನಗಳನ್ನು ಜಗದಾದ್ಯಂತ ಹರಡುವ ಕೆಲಸ ಆಗಲೇ ಆರಂಭವಾಗಿದೆ. ಅನೇಕ ಗುಂಪುಗಳು ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿವೆ. ಅಗೋಚರ ಋಷಿಗಳು ಮತ್ತು ಅವರ ಅಸಂಖ್ಯಾತ ಚಾನಲ್‌ಗಳು ಮಾರ್ಗದರ್ಶನ ಮಾಡುತ್ತಿದ್ದಾರೆ ಹಾಗೂ ಮೌನವಾಗಿ ಕ್ರಾಂತಿಯು ಹುಟ್ಟಿಕೊಳ್ಳುತ್ತಿದೆ.

ಒಬ್ಬ ವ್ಯಕ್ತಿಯು ತಾನು ಬದಲಾಗಲು ಇಚ್ಛಿಸುವವರೆಗೆ ಅವನಲ್ಲಿ ಬದಲಾವಣೆ ಬರಲು ಸಾಧ್ಯವೇ ಇಲ್ಲ ಎಂದು ಒಮ್ಮೆ ಒಬ್ಬ ವ್ಯಕ್ತಿ ಹೇಳಿದರು. ತಾವು ನಿಯತವಾಗಿ ಧ್ಯಾನ ಮಾಡುತ್ತಿದ್ದರೂ ತಮ್ಮಲ್ಲಿ ಯಾವುದೇ ಬದಲಾವಣೆ ಕಂಡುಬರುತ್ತಿಲ್ಲ ಎಂದು ಜನರು ಯಾವಾಗಲಾದರೂ ದೂರಿತ್ತರೆ, ನನಗೆ ಈ ಮಾತು ನೆನಪಾಗುತ್ತದೆ. ಕೇವಲ ಧ್ಯಾನ ಮಾತ್ರ ಸಾಕಾಗುವುದಿಲ್ಲ! ಪ್ರಜ್ಞಾಪೂರ್ವಕವಾಗಿ ಅದರ ಪ್ರಭಾವವು ಕೆಲಸ ಮಾಡಲು ಬಿಡಬೇಕು. ಬದಲಾವಣೆ ನಿಧಾನವಾಗಿಯಾದರೂ ಆಗುವುದಂತೂ ಖಂಡಿತ. ನಾವು ಬಹು ಕಾಲದಿಂದ ಧ್ಯಾನ ಮಾಡುತ್ತಿದ್ದರೂ ಕಲ್ಲುಬಂಡೆಯಂತಿರಬಹುದು ಅಥವಾ ಆಳವಾದ ಅಪ್ರಜ್ಞಾ ಸ್ತರಗಳಲ್ಲಿ ಮೊದಲು ಆರಂಭವಾಗುವ ಬದಲಾವಣೆಗಳನ್ನು ಪ್ರತಿರೋಧಿಸಲೂಬಹುದು!

ಇತ್ತೀಚೆಗೆ ನನಗೆ ಅಧ್ಯಾತ್ಮದ ಉನ್ನತ ಹಂತದಲ್ಲಿ ದೀಕ್ಷೆಯಿತ್ತಾಗ ಋಷಿಗಳು ನನ್ನಲ್ಲಿ ಒಂದು ಶಕ್ತಿಯನ್ನು ಪ್ರತಿಷ್ಠಾಪಿಸಿದರು, ಅದು ನಿರಂತರವಾಗಿ ಕೆಲಸ ಮಾಡುತ್ತಿದೆ. ಅದನ್ನು ನಾನು ಬೆಳಕಿನ ರೂಪದಲ್ಲಿ ಕಾಣುತ್ತಿದ್ದೇನೆ. ಅದರ ಪ್ರಭಾವವು ಎಲ್ಲ ಮಟ್ಟಗಳಲ್ಲಿ ಅನುಭವಕ್ಕೆ ಬರುತ್ತಿದೆ. ಧ್ಯಾನ ಮಾಡುವ ಅನೇಕ ವಿದ್ಯಾರ್ಥಿಗಳು ನನ್ನಲ್ಲಿ ದೇವಿಯನ್ನು ಕಂಡಿದ್ದಾರೆ. ಒಬ್ಬಾಕೆ ನನ್ನೊಳಗೆ ತಾರಾದೇವಿಯನ್ನು ನೋಡಿದೆನೆಂದು ಬರೆದರು. ಅದಾದ ಸ್ವಲ್ಪ ಸಮಯದ ನಂತರವಷ್ಟೇ, ಶಂಬಲದ ದೇವತೆಯಾದ ತಾರಾದೇವಿಯ ಶಕ್ತಿಯೇ ನನ್ನೊಳಗಿರುವುದು ಎಂದು ಒಂದು ಸ್ಫುರಣದಲ್ಲಿ ನನಗೆ ಅರ್ಥವಾಯಿತು. ನಾನು ಅದರ ದೃಢೀಕರಣಕ್ಕಾಗಿ, ಒಂದು ಕುರುಹಿಗಾಗಿ ಕಾದೆ.

ಕೆಲವೇ ದಿನಗಳ ಹಿಂದೆ ಒಬ್ಬಾಕೆ ನನಗೆ ತಾರಾದೇವಿಯ ಮೂರ್ತಿಯೊಂದನ್ನು ಕಾಣಿಕೆಯಾಗಿತ್ತರು! ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ

ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ

ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಸಪ್ತರ್ಷಿ ಧ್ಯಾನ ಕೇಂದ್ರ, **ರಾಜರಾಜೇಶ್ವರಿ ಬಡಾವಣೆ**

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಚಿಕ್ಕ ಗುಬ್ಬಿಯ ಸರ್ಕಾರಿ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಲೈಟ್ ಚಾನಲಿಂಗ್ ಮಾಡುವುದರೊಂದಿಗೆ ಪ್ರಾರಂಭವಾಯಿತು.

### ಸುದ್ದಿ-ಸೂಚನೆಗಳು

- ಆಗಸ್ಟ್ 11ರಂದು ಧ್ಯಾನಿಗಳು, ತಪೋನಗರದ ಮೆಡಿಟೇಶನ್ ಹಾಲ್‌ನಲ್ಲಿ ಸೇರಿ ಸೂರ್ಯ ಗ್ರಹಣದ ಪೂರ್ತಿ ಸಮಯ ಇಡೀ ಪ್ರಪಂಚಕ್ಕೆ ಗ್ರಹಣದ ಚೈತನ್ಯಗಳನ್ನು ಚಾನಲ್ ಮಾಡಿದರು.
- 25-8-2018ರಂದು ಆನೇಕಲ್‌ನ ನಮ್ಮ ಸಪ್ತಋಷಿ ಧ್ಯಾನ ಕೇಂದ್ರದಲ್ಲಿ ಮತ್ತು 26-8-2018ರಂದು ತಪೋನಗರದಲ್ಲಿ, ಮಹರ್ಷಿ ಅಮರರವರ ಮಹಾಸಮಾಧಿ ಕಾರ್ಯಕ್ರಮವನ್ನು ಆಚರಿಸಲಾಯಿತು.
- ಶಾಲಾ ಮಕ್ಕಳಿಗೆ ಲೈಟ್ ಚಾನಲಿಂಗ್ ಕಲಿಸಿಕೊಡಲು ಹೆಚ್ಚಿನ ಕಾರ್ಯಕರ್ತರು ಬೇಕಾಗಿದ್ದಾರೆ. ಈ ಮಹೋನ್ನತ ಕೆಲಸಕ್ಕೆ ಸೇರಲು ಆಸಕ್ತಿಯಿರುವ ಧ್ಯಾನಿಗಳಿಗೆ ಸ್ವಾಗತವಿದೆ. ಈ ಕೆಲಸಕ್ಕಾಗಿ ವಾರದ ಯಾವುದಾದರೊಂದು ದಿನದಲ್ಲಿ ಅರ್ಧ ದಿನದಷ್ಟು ಸಮಯವನ್ನು ವಿನಿಯೋಗಿಸಲು ಸಾಧ್ಯವಿರುವವರು ಇದರಲ್ಲಿ ಭಾಗವಹಿಸಬಹುದು. ಆಸಕ್ತಿಯುಳ್ಳ ಧ್ಯಾನಿಗಳು ಮಾನಸ ಆಫೀಸ್‌ಅನ್ನು ಸಂಪರ್ಕಿಸಬಹುದು.

### ಶ್ರೀ ಕೃಷ್ಣ ಜನ್ಮಾಷ್ಟಮಿ ವಿಶೇಷ ಧ್ಯಾನದ ತಂತ್ರ

ಒಂದು ದೊಡ್ಡ ನೀಲಿಬಣ್ಣದ ಬೆಳಕಿನ ಗೋಳವನ್ನು ಅಥವಾ ಭಗವಾನ್ ಶ್ರೀಕೃಷ್ಣನ ಆಕಾರವನ್ನು ಊಹಿಸಿಕೊಳ್ಳಿ. ನೀವು ಒಂದು ಬೆಳಕಿನ ಕಿರಣವಾಗಿ ಈ ಗೋಳವನ್ನು ಅಥವಾ ಆಕಾರವನ್ನು ಪ್ರವೇಶಿಸಿ. ನೀವು ಶ್ರೀಕೃಷ್ಣನೊಳಗೆ ಇದ್ದೀರಿ. ಅವನನ್ನು ಅನುಭವಿಸಿ. ಈ ತಂತ್ರವನ್ನು ಒಂದು ದಿನದಲ್ಲಿ ಎಷ್ಟು ಸಮಯದವರೆಗೆ ಬೇಕಾದರೂ, ಎಷ್ಟು ಬಾರಿಯಾದರೂ ಅಭ್ಯಾಸ ಮಾಡಬಹುದು. ಈ ತಂತ್ರವನ್ನು ಹತ್ತು ದಿನಗಳವರೆಗೆ ದಿನನಿತ್ಯದ ಧ್ಯಾನದ ಬದಲಿಗೆ ಅಭ್ಯಾಸ ಮಾಡಬಹುದು.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 02 | ಭಾನು | ಶ್ರೀ ಕೃಷ್ಣ ಜನ್ಮಾಷ್ಟಮಿ |
| 03 | ಸೋಮ | ಕೃಷ್ಣ ಅಷ್ಟಮಿ |
| 08 | ಶನಿ | ಮಾಸ ಶಿವರಾತ್ರಿ |
| 09 | ಭಾನು | ಅಮಾವಾಸ್ಯೆ |
| 12 | ಬುಧ | ಗೌರಿ ಪೂಜೆ |
| 13 | ಗುರು | ಗಣೇಶ ಪೂಜೆ |
| 17 | ಸೋಮ | ಶುಕ್ಲ ಅಷ್ಟಮಿ |
| 19 | ಬುಧ | ಶುಕ್ಲ ದಶಮಿ |
| 23 | ಭಾನು | ಅನಂತ ಪದ್ಮನಾಭ ವ್ರತ |
| 25 | ಮಂಗಳ | ಪೂರ್ಣಿಮಾ |

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು: ಬೆಳಿಗ್ಗೆ 11-12<br>ಲೈಟ್ ಚಾನಲಿಂಗ್:<br>ಮಧ್ಯಾಹ್ನ 12-1 |
| 02-09-18 | ಶ್ರೀ ಕೃಷ್ಣ ಜನ್ಮಾಷ್ಟಮಿ ವಿಶೇಷ ಧ್ಯಾನ: ಬೆಳಿಗ್ಗೆ 11 ರಿಂದ 1 |
| 09-09-18 | ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ |
| 16-09-18 | ಮಧ್ಯಾಹ್ನ 2ಕ್ಕೆ ರಾ ಗ್ರೂಪ್ ಸಂಧಿಸುತ್ತದೆ |
| 30-09-18 | ಅಖಂಡ ಧ್ಯಾನ<br>(ಲೈಟ್ ಚಾನಲಿಂಗ್):<br>ಬೆಳಿಗ್ಗೆ 11 ರಿಂದ 1 |

ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿನೀಡಿ.

ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಮಾನಸ ಆಫೀಸ್‌ಅನ್ನು ಸಂಪರ್ಕಿಸಿ.

## ನಿಯತವಾಗಿ ನಡೆಯುತ್ತಿರುವ ಲೈಟ್ ಚಾನಲಿಂಗ್ ಕೇಂದ್ರಗಳು

ಜನರು ಸ್ವಯಂ ಪ್ರೇರಿತರಾಗಿ ನಿಯತಕಾಲಿಕವಾಗಿ ಈ ಕೇಂದ್ರಗಳಲ್ಲಿ ಸೇರಿ ಲೈಟ್ ಚಾನಲಿಂಗ್ ಮಾಡುತ್ತಾರೆ. ಶಾಂತಿಯನ್ನು ಹರಡುವ ಈ ಮಹಾನ್ ಕೆಲಸಕ್ಕೆ, ಕೆಳಗಿನ ಯಾವುದೇ ಕೇಂದ್ರಗಳಲ್ಲಿ ನಮ್ಮೊಂದಿಗೆ ಸೇರಲು ಪ್ರತಿಯೊಬ್ಬರಿಗೂ ಸ್ವಾಗತ. ಸದಸ್ಯತ್ವವಿಲ್ಲ, ಶುಲ್ಕವಿಲ್ಲ.

**ಬೆಂಗಳೂರು:**

**ಶ್ರೀ ಸಿದ್ಧಾಶ್ರಮ,** 17ನೇ ಅಡ್ಡ ರಸ್ತೆ, ಮಲ್ಲೇಶ್ವರಂ;
ಸೋಮವಾರದಿಂದ ಶುಕ್ರವಾರದವರೆಗೆ (ಸಂಜೆ 7 ರಿಂದ 7.15),
ದೂರವಾಣಿ: +91 9480121545 ಶ್ರೀ ಕೆ. ಚಂದ್ರಶೇಖರ್

**ಆಂಜನೇಯ ದೇವಸ್ಥಾನ,** ಮಹಾಲಕ್ಷ್ಮಿ ಬಡಾವಣೆ;
ಸೋಮವಾರ (ಸಂಜೆ 6.30 ರಿಂದ 7)
ದೂರವಾಣಿ: +91 9972111809 ಶ್ರೀಮತಿ. ಅಂಜಲಿ ಪಾಟೀಲ್ ಕೆ.

**ಮಾರುತಿ ಮಂದಿರ,** ವಿಜಯನಗರ;
ಬುಧವಾರ (ಸಂಜೆ 6.30 ರಿಂದ 7)
ದೂರವಾಣಿ: +91 9972111809 ಶ್ರೀಮತಿ. ಅಂಜಲಿ ಪಾಟೀಲ್ ಕೆ.

**'ಸುಮತಿ',** ನಂ. 481, 7ನೇ ಅಡ್ಡ ರಸ್ತೆ, 7ನೇ ಮುಖ್ಯ ರಸ್ತೆ, ಜೆ.ಪಿ. ನಗರ, 3ನೇ ಹಂತ;
ಶುಕ್ರವಾರ (ಸಂಜೆ 6.30 ರಿಂದ 7), ದೂರವಾಣಿ: +91 9900110351 ಶ್ರೀ. ರಮೇಶ್ ವಿ. ಭೋಸೆಕರ್

**ಸಿದ್ಧಿ ವಿನಾಯಕ ದೇವಸ್ಥಾನ,** 59/1 ಹಚ್ಚಿನ್ಸ್ ರಸ್ತೆ, 3ನೇ ಅಡ್ಡ ರಸ್ತೆ, ಕೂಕ್ ಟೌನ್;
ಶುಕ್ರವಾರ (ಮಧ್ಯಾಹ್ನ 12), ದೂರವಾಣಿ: +919980205803, ಶ್ರೀಮತಿ. ನಿರ್ಮಲ ಬಾಲ

**ಬಲಮುರಿ ಮಹಾಗಣಪತಿ, ಶ್ರೀ ರಾಜರಾಜೇಶ್ವರಿ ಮತ್ತು ಶ್ರೀ ಲಕ್ಷ್ಮಿ ನಾರಾಯಣ ದೇವಸ್ಥಾನ,**
8ನೇ ಅಡ್ಡ ರಸ್ತೆ, ಹೊಯ್ಸಳ ವೃತ್ತದ ಬಳಿ, ಕೆಂಗೇರಿ ಸ್ಯಾಟ್‌ಲೈಟ್ ಟೌನ್;
ಶನಿವಾರ (ಸಂಜೆ 6.30 ರಿಂದ 7), ದೂರವಾಣಿ: +91 9972111809 ಶ್ರೀಮತಿ. ಅಂಜಲಿ ಪಾಟೀಲ್ ಕೆ.

**ಸೋಲಾಪುರ್:**

**ಬಾಲ ಗಣೇಶ್ ಮಂದಿರ್,** ಬೂಷರ್ ಪೇಟ್ ಮೊಹೊಲ್;
ಸೋಮವಾರದಿಂದ ಗುರುವಾರದವರೆಗೆ (ಸಂಜೆ 7 ರಿಂದ 7.15),
ದೂರವಾಣಿ: +91 9860967066 ಶ್ರೀ ವಿವೇಕಾನಂದ ಸ್ವಾಮಿ; +91 9970800279 ಶ್ರೀಮತಿ ಸ್ವರೂಪ ಸ್ವಾಮಿ

**ಚನ್ನೈ:**

481, **ಸಾಯಿಪ್ರೇಮ್,** 19ನೇ ಬೀದಿ, 4ನೇ ಸೆಕ್ಟರ್, ಕೆ.ಕೆ.ನಗರ್;
ಭಾನುವಾರ (ಬೆಳಿಗ್ಗೆ 10 ರಿಂದ 10.30), ದೂರವಾಣಿ: +91 9444880409 ಶ್ರೀಮತಿ. ರಾಜಲಕ್ಷ್ಮಿ ಆರ್.

**ಪುಣೆ:**

3–ಬಿ, **ಕಪಿಲ ಹೌಸಿಂಗ್ ಸೊಸೈಟಿ,** ಗೋಖಲೇನಗರ್;
ಶನಿವಾರ (7 ರಿಂದ 7.30), ದೂರವಾಣಿ: +91 9011038169 ಶ್ರೀ ಅಶುತೋಷ್ ನಾವಂಗಲ್

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್; ಅನು: ಪಾಂಡುರಂಗ**

ಭಾರತದ ಬಹು ಭಾಗಗಳಲ್ಲಿ ಮಳೆಯಾಗುತ್ತಿದ್ದಂತೆ, ಆಷಾಢ ಮಾಸದ ಆಧ್ಯಾತ್ಮಿಕ ಚೈತನ್ಯಗಳು ಬೆಳಕಿನ ಜೊತೆ ಪ್ರಪಂಚಾದ್ಯಂತ ಪ್ರವಾಹದಂತೆ ಹರಿದು ಬಂದವು. ದೈವೀಕತೆ ನಮ್ಮಲ್ಲಿನ ಅಜ್ಞಾನವನ್ನು ಸ್ವಚ್ಛಗೊಳಿಸುವಂತೆ, ಮಳೆ ಧೂಳಿನ ಪದರಗಳನ್ನೆಲ್ಲ ಕೊಚ್ಚಿಕೊಂಡು ಹೋಯಿತು, ಪ್ರಕೃತಿ ನವಚೈತನ್ಯ ಪಡೆಯಿತು. ನೀರನ್ನು ಶೇಖರಿಸಿಟ್ಟುಕೊಂಡಾಗ, ಅದು ಕಡು ಬೇಸಿಗೆಯಲ್ಲಿ ದಾಹವನ್ನು ಹಿಂಗಿಸುತ್ತದೆ, ಅದೇ ರೀತಿ ಆಧ್ಯಾತ್ಮಿಕ ಚೈತನ್ಯಗಳೂ ಕೂಡ. ಜುಲೈ ತಿಂಗಳಿನ 2 ಗ್ರಹಣಗಳ ಸಮಯದಲ್ಲಿ ಹೆಚ್ಚು ಧ್ಯಾನ ಮಾಡಿದವರೆಲ್ಲರೂ ಸೂಕ್ಷ್ಮ ಮಟ್ಟದ ಚೈತನ್ಯಗಳನ್ನು ಅಗಾಧ ಪ್ರಮಾಣದಲ್ಲಿ ಪಡೆದರು. ಈ ಚೈತನ್ಯಗಳು ಅವರಿಗೆ ಅಸ್ಥಿರ ಸಾಧನೆಯ ಸಮಯಗಳಲ್ಲಿಯೂ ಮುಂದುವರಿಯಲು ಸಹಾಯ ಮಾಡುತ್ತವೆ. ಜುಲೈ ತಿಂಗಳಿನ ಅನೇಕ ಸಂದರ್ಭಗಳಲ್ಲಿ ಮಾಡಿದ ವಿಶೇಷ ಧ್ಯಾನಗಳಿಂದ, ತಪೋನಗರದ ಚೈತನ್ಯಗಳ ಭಂಡಾರಕ್ಕೆ ಹೆಚ್ಚಿನ ಚೈತನ್ಯಗಳ ಸೇರ್ಪಡೆಯಾಯಿತು. ಪ್ರಳಯ ಕಾಲದ ಮುಂಬರುವ ವರ್ಷಗಳಲ್ಲಿ, ಜೀವನ ಕಠಿಣವಾಗಿರಲೀ ಅಥವಾ ಸಂತೋಷಮಯವಾಗಿರಲೀ, ಯಾವುದೇ ಸಾಧಕ ತಪೋನಗರದಿಂದ ಈ ಚೈತನ್ಯಗಳನ್ನು ಪಡೆದು ತನ್ನಲ್ಲಿ ತುಂಬಿಕೊಳ್ಳಬಹುದು.

ಚಿಕ್ಕಗುಬ್ಬಿ ಗ್ರಾಮ ಸುತ್ತಮುತ್ತಲೂ ಬೆಳೆದಿದೆ. ಜನಸಂಖ್ಯೆಯಿಂದಾಗಲೀ, ವ್ಯಾಪರೀಕರಣದಿಂದಾಗಲೀ ಮತ್ತು ಕಟ್ಟಡಗಳಿಂದಲಾಗಲೀ, ಚಿಕ್ಕಗುಬ್ಬಿ ಇನ್ನೂ ತನ್ನ ಹಸಿರು ಚೆಲುವನ್ನು ಸಂಪೂರ್ಣವಾಗಿ ಕಳೆದುಕೊಂಡಿಲ್ಲ. ಈಗಲೂ ದನ ಕಾಯುವವರು ಹಾಗೂ ಕುರಿ ಕಾಯುವವರು ವಾಹನ ಸಂಚಾರ ನಿಲ್ಲುವಂತೆ ಮಾಡುತ್ತಾರೆ. ಅಪರೂಪಕ್ಕೊಮ್ಮೆಯಾದರೂ ಅಪರೂಪದ ಪಕ್ಷಿಗಳನ್ನು ಇನ್ನೂ ನೋಡಬಹುದು. ಬೆಳಿಗ್ಗೆ ಮತ್ತು ಸಂಜೆಯ ಚಟುವಟಿಕೆಗಳ ನಡುವೆಯೇ, ಮಧ್ಯಾಹ್ನ ಮತ್ತು ರಾತ್ರಿ ಸಮಯಗಳಲ್ಲಿ ಮೌನ ಆವರಿಸಿರುತ್ತದೆ. ಕಸದ ರಾಶಿಗಳು ಭೂಮಿಯ ಫಲವತ್ತತೆಯನ್ನು ಇನ್ನೂ ಪೂರ್ಣವಾಗಿ ಹಾಳುಮಾಡಿಲ್ಲ. ಕೆಲವೊಮ್ಮೆ ಹಾವುಗಳು ಹರಿದಾಡುವುದನ್ನು ಇನ್ನೂ ಕಾಣಬಹುದು. ಪ್ರತಿ ಕೆಲವು ತಿಂಗಳುಗಳಿಗೊಮ್ಮೆ ಹೊಸ ಹೊಸ ಅಪಾರ್ಟ್‌ಮೆಂಟ್‌ಗಳು ತಲೆಯೆತ್ತುತ್ತಿರುವುದರಿಂದ ಪರಿಸರದಲ್ಲಿ ಬದಲಾವಣೆಗಳಾಗುತ್ತಿವೆ. ಪ್ರಳಯವು ಇಡೀ ಪ್ರಪಂಚದಲ್ಲಿ ಉತ್ತಮ ಬದಲಾವಣೆಯನ್ನು ತರುವ ಭರವಸೆಯನ್ನು ನೀಡುತ್ತಿರುವಾಗ, ನಮ್ಮ ಸುತ್ತಮುತ್ತಲಿನ ಈ ಬದಲಾವಣೆಗಳು ನಮ್ಮಲ್ಲಿ ಕಹಿಭಾವ ಮೂಡಿಸದಿರಲಿ. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

# ಗುರೂಜಿಯವರ ನುಡಿಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

ಅಕ್ಟೋಬರ್ 2005 (ಮುಂದುವರಿದ ಭಾಗ)

ಎರಡು ಗ್ರಹಣಗಳಿದ್ದವು. ಎರಡನೆಯ ಗ್ರಹಣವು ಬಹು ಮುಖ್ಯ ಘಟನೆಯಾಗಿತ್ತು ಎಂದು ನಾನು ಗ್ರಹಣದ ಸಮಯದಲ್ಲಿ ಹೇಳಿದ್ದು ನೆನಪಿದೆ. ಎರಡನೆಯ ಗ್ರಹಣದೊಂದಿಗೆ ಪ್ರಳಯದ ಒಂದು ಹಂತ ಮುಕ್ತಾಯವಾಯಿತು. ನಾವೀಗ ಹೊಸ ಹಂತವನ್ನು ಪ್ರವೇಶಿಸುತ್ತಿದ್ದೇವೆ. ಇಲ್ಲಿಂದ ಮುಂದೆ ಪ್ರಳಯ ತೀವ್ರಗೊಳ್ಳುತ್ತದೆ, ಗಂಭೀರ ಸ್ವರೂಪಪದ್ದಾಗುತ್ತದೆ. ಜಾಗೃತಗೊಂಡಿದ್ದೇವೆಂದು ಹೇಳಿಕೊಳ್ಳಬಹುದಾದ ನಾವು ಇಷ್ಟರೊಳಗೆ ಸ್ಪಷ್ಟವಾದ ಆಯ್ಕೆಗಳನ್ನು ಮಾಡಿಕೊಂಡಿರಬೇಕಾಗಿತ್ತು – ಬದಲಾಗುವ ಆಯ್ಕೆ, ಪರಿವರ್ತನೆಯಾಗುವ ಆಯ್ಕೆ. ಕೇವಲ ಆಯ್ಕೆ ಮಾಡಿಕೊಂಡರೂ ಸಾಕು, ಆಗ ನಾವು ಪ್ರಳಯದ ಕಷ್ಟವನ್ನೆದುರಿಸಬೇಕಾದ ಸಂದರ್ಭ ಬರುವುದಿಲ್ಲ. ನಾನು ಯಾವಾಗಲೂ ಹೇಳುವ ಹಾಗೆ, ನಾವು ಸಾಧನೆಯನ್ನು ಪೂರ್ಣಗೊಳಿಸಬೇಕಾಗಿಲ್ಲ, ಅಂತಿಮ ಸಮಾಧಿಯನ್ನು ತಲುಪಬೇಕಾಗಿಲ್ಲ. ಬದಲಾಗುವುದನ್ನು ಆರಿಸಿಕೊಂಡರೆ ಸಾಕು. ನಮ್ಮ ಉದ್ದೇಶವನ್ನು ಸ್ಪಷ್ಟಪಡಿಸಿಕೊಂಡರೆ ಸಾಕು. ಆದ್ದರಿಂದಲೇ ನಾವು ಸಾಧನೆಯಲ್ಲಿ ಬೇರೂರಬೇಕೆಂದು ನಾನು ಹೇಳಿದ್ದು. ಬದಲಾಗಬೇಕೆಂಬ ನಿರ್ಧಾರ ಸಾಕು. ಇನ್ನೂ ನಿರ್ಧಾರ ಮಾಡಿಲ್ಲದಿದ್ದರೆ ಈಗಲೇ, ಅಥವಾ ಮುಂದಿನ ಭಾನುವಾರ ನಾವಿಲ್ಲಿ ಸೇರುವುದರೊಳಗೆ ನಿರ್ಧಾರ ಮಾಡುವುದು ಉತ್ತಮ. ಹೆಚ್ಚು ಸಮಯ ಉಳಿದಿಲ್ಲ. ಇದಾವುದನ್ನೂ ತಿಳಿಯದ ಜನರಿರುವ ಹೊರಗಿನ ಜೀವನವನ್ನು ಕಣ್ತೆರೆದು ನೋಡಿ. ಮುಂದಿನ ಬಾಳು ಬಹಳ ಕಷ್ಟದ್ದಾಗಿದೆ. ಪ್ರಳಯದ ಪ್ರಕ್ರಿಯೆ ತೀವ್ರಗೊಳ್ಳುತ್ತಿದೆ, ಅದು ಇನ್ನು ಮುಂದೆ ಇನ್ನೂ ಹೆಚ್ಚು ತೀವ್ರಗೊಳ್ಳುತ್ತದೆ.

ನಮ್ಮಲ್ಲಿ ಅನೇಕರಿಗೆ ಧ್ಯಾನ ಮಾಡುವುದರಲ್ಲಿ ಸಮಸ್ಯೆಯಿದೆ ಅಥವ ಕಷ್ಟವಿದೆ. ನಮಗೆ ಧ್ಯಾನ ಮಾಡುವಾಗ ನಿದ್ರೆ ಬಂದಹಾಗೆ ಆಗುತ್ತದೆ. ನಾನು ಇದರ ಬಗ್ಗೆ ಹಿಂದೆ ಮಾತನಾಡಿದ್ದೇನಾದರೂ ಈಗ ಇದರ ಬಗ್ಗೆ ಹೊಸ ತಿಳುವಳಿಕೆ ಇದೆ. ನಾವು ಧ್ಯಾನ ಮಾಡುತ್ತಿರುವ ವಿಧಾನದಲ್ಲಿ ತಪ್ಪೇನೋ ಇದೆ ಎಂದು ತಿಳಿಯಬೇಡಿ. ಋಷಿಗಳು ಹೆಚ್ಚು ಬಲಶಾಲಿಯಾದ ಚೈತನ್ಯಗಳನ್ನು ಬಿಡುಗಡೆ ಮಾಡಿದ್ದಾರೆ. ಆದರೆ ನಮ್ಮ ದೇಹಗಳು ಅಷ್ಟೊಂದು ಬಲಶಾಲಿಯಾಗಿಲ್ಲದಿರುವುದರಿಂದ ಸ್ವಲ್ಪ ಕಾಲದವರೆಗೆ ನಮಗೆ ಈ ಸಮಸ್ಯೆಯಿರುತ್ತದೆ. ಸ್ವಲ್ಪ ಸಮಯದ ನಂತರ ನಮ್ಮ ದೇಹಗಳು, ಈ ಹೊಸ ಚೈತನ್ಯಗಳಿಗೆ ಹೊಂದಿಕೊಳ್ಳುವಷ್ಟು ಬಲಿಷ್ಠವಾಗುತ್ತವೆ. ಅಲ್ಲಿಯವರೆಗೆ ನಾವೇನು ಮಾಡಬೇಕು? ನಾನು ಹಿಂದೆ ತಿಳಿಸಿದ್ದಂತೆಯೇ ತ್ರಾಟಕವನ್ನು ಪರಿಶೀಲಿಸುತ್ತಿರಿ ಮತ್ತು ತಂತ್ರದ ಕಡೆ ಹೆಚ್ಚು ಗಮನ ಹರಿಸಿ. ಬೇರೆ ದಾರಿಯಿಲ್ಲ. ವಿಶೇಷವಾದ ಯಾವುದೇ ಹೆಚ್ಚಿನ ಪ್ರಯತ್ನವಿಲ್ಲದೇ, ನೀವಿದನ್ನು ದಾಟುತ್ತಿರುವುದನ್ನು ನೋಡುತ್ತೀರಿ.

ನಮ್ಮವರೇ ಆದ ಸಾಧಕರೊಬ್ಬರನ್ನು ಒಂದು ರೀತಿಯಲ್ಲಿ ಎದುರಿಸಬೇಕಾಯಿತು. ಆತ ಒಂದು ಉದ್ದವಾದ ಪತ್ರ ಬರೆದು, 'ನಾನು ಧ್ಯಾನಮಾಡುತ್ತಿಲ್ಲ,' ಎಂದು ಬಹಳ ಪ್ರಾಮಾಣಿಕವಾಗಿ ತಿಳಿಸಿದ! ಪ್ರಾಮಾಣಿಕತೆಯನ್ನೇನೋ ಮೆಚ್ಚಲೇಬೇಕು, ಅದಕ್ಕೆ ಅದರದೇ ಆದ ಬೆಲೆಯಿದೆ. ಆತ ಮುಂದುವರೆದು ಹೀಗೆ ಬರೆದ, 'ನಾನು ಓದುತ್ತಿಲ್ಲ, ನಾನು ಸೋಮಾರಿಯಾಗಿದ್ದೇನೆ, ದಯವಿಟ್ಟು ಸಹಾಯ ಮಾಡಿ!' ಅವನಿಗೆ ಏನು ಹೇಳಬೇಕೆನ್ನುವುದೇ ನನ್ನ ಸಮಸ್ಯೆ! ಆದರೂ ಅವನನ್ನು ಕೇಳಿದೆ, 'ಯಾವ ರೀತಿಯ ಸಹಾಯವನ್ನು ನೀನು ಬಯಸುತ್ತೀದ್ದೀಯ ಎಂದು ದಯವಿಟ್ಟು ತಿಳಿಸು.' ಎಲ್ಲ ಉತ್ತರಗಳೂ ಪ್ರಶ್ನೆಗಳಲ್ಲಿಯೇ ಇವೆ, ಪರಿಹಾರಗಳು ಸಮಸ್ಯೆಯಲ್ಲಿಯೇ ಇವೆ. ಯಾರಾದರೂ ಸೋಮಾರಿಯಾಗಿದ್ದರೆ ಅವನು ಅದರಿಂದ ಹೊರಬರಬೇಕು; ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕಾದರೆ ಅವನು ಓದಬೇಕು; ಧ್ಯಾನ ಮಾಡಬೇಕು. ವಿಷಯವೇನೆಂದರೆ, ನಾವು ಪವಾಡವನ್ನು ನಿರೀಕ್ಷಿಸುತ್ತೇವೆ. ಓದದೇ ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕೆಂದು ಬಯಸುತ್ತೇವೆ! ಧ್ಯಾನ ಮಾಡದಿದ್ದರೂ ನಮಗೆ ಎಲ್ಲ ರೀತಿಯ ಸಹಾಯ ಬೇಕು. ವಿಷಯವೇನೆಂದರೆ, ಪವಾಡಗಳು ಜರುಗುತ್ತವೆ, ಆದರೆ ಪ್ರಯತ್ನ ಮಾಡಿದಾಗ ಮಾತ್ರ. ನಾವು ಅತ್ಯಂತ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದಾಗ ದೇವರು ಸಹಾಯ ಮಾಡುತ್ತಾನೆ. ಒಂದು ಪ್ರಸಿದ್ಧವಾದ ಹೇಳಿಕೆಯಿದೆ – ನಾನು ಒಂದು ಹೆಜ್ಜೆ ಮುಂದಿಟ್ಟರೆ ದೇವರು ನನ್ನ ಕಡೆಗೆ ಒಂಭತ್ತು ಹೆಜ್ಜೆಯಿಡುತ್ತಾನೆ. ಆದರೆ ನಾವು ಆ ಒಂದು ಹೆಜ್ಜೆಯಿಡುವುದನ್ನು ಅವನು ನಿರೀಕ್ಷಿಸುತ್ತಾನೆ! ನಾವು ಆ ಒಂದು ಹೆಜ್ಜೆಯಿಡದಿದ್ದರೆ, ಅವನು ನಮ್ಮ ಕಡೆಗೆ ಒಂದು ಇಂಚು ಕೂಡಾ ಕದಲುವುದಿಲ್ಲ! ನಾವಿದನ್ನು ಅರಿತುಕೊಳ್ಳಬೇಕು. ನಾವಿಲ್ಲಿ ಸಾಕಷ್ಟು ಸಮಯ ಕಳೆದಿದ್ದೇವೆ. ನಾವು ಋಷಿಗಳ ವಿಧಾನಗಳನ್ನು ಅರ್ಥ ಮಾಡಿಕೊಳ್ಳಬೇಕು.

ಜನರು ತಮಗಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ನಮ್ಮಲ್ಲಿಗೆ ಬರುತ್ತಾರೆ. ನಾವು ಕೆಲವು ದಾರಿಗಳನ್ನು ಸೂಚಿಸುತ್ತೇವೆ, ಆದರೆ ಮರುದಿನವೇ ಅವರು ಜ್ಯೋತಿಷಿಗಳ ಬಳಿಗೆ ಹೋಗುತ್ತಾರೆ. ಜ್ಯೋತಿಷಿಗಳು, ಶಾಂತಿ ಹೋಮಗಳನ್ನು ಮಾಡಬೇಕೆಂದಾಗ ಅವರು 10000 ರೂಪಾಯಿಗಳನ್ನು ಖರ್ಚುಮಾಡುತ್ತಾರೆ! ಒಂದು ದಿನವೂ ಕಾಯುವುದಿಲ್ಲ. ಋಷಿಗಳ ವಿಧಾನಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಪ್ರತಿಯೊಬ್ಬರಿಗೂ ಪ್ರತಿಬಾರಿಯೂ ಋಷಿಗಳು ಸಹಾಯ ಮಾಡುತ್ತಾರೆ. ನಮ್ಮೆಲ್ಲರಿಗೂ ಈ ಅನುಭವವಾಗಿದೆ. ಆದರೆ ಅವರು ನಾವು ಬಯಸುವ ರೀತಿಯಲ್ಲಿ ಸಹಾಯ ಮಾಡುವುದಿಲ್ಲ. ನಮಗೆ ದೇಹದಲ್ಲಿ ನೋವಿದ್ದರೆ ಅಥವ ಸಮಸ್ಯೆಯಿದ್ದರೆ, ಕೆಲವೊಮ್ಮೆ ಅದಕ್ಕವರು ಅವಕಾಶ ನೀಡುತ್ತಾರೆ. ಅಂದರೆ ಸಹಾಯ ಮಾಡುವುದಿಲ್ಲ ಎಂದುಕೊಳ್ಳೋಣ. ಸಹಾಯ ಮಾಡದೇ ಇರುವುದೇ ಆ ಸಮಯದಲ್ಲಿ ಸರಿಯಿರುತ್ತದೆ. ದೈಹಿಕ ಸಮಸ್ಯೆಯೊಂದಿದ್ದರೆ ಅದನ್ನವರು ಆ ಸಮಯದಲ್ಲಿ ಗುಣಪಡಿಸುವುದಿಲ್ಲವೆಂದುಕೊಳ್ಳೋಣ, ಆ ಸಮಯದಲ್ಲಿ ಗುಣಪಡಿಸದಿರುವುದೇ ಸರಿಯಾದ ಹೀಲಿಂಗ್. ನಮ್ಮಲ್ಲಿ ತಾಳ್ಮೆಯಿರಬೇಕು. ಅವರೇಕೆ ನಮಗೆ ಸಹಾಯ ಮಾಡುವುದಿಲ್ಲ? ನಾನು ಅನೇಕ ಬಾರಿ ಹೇಳಿರುವ ಮತ್ತು 'ಬೆಳಕಿಗೆ ಬಾಗಿಲುಗಳು' ಪುಸ್ತಕದಲ್ಲಿಯೂ ಬರೆದಿರುವ ಒಂದು ವಿಷಯವನ್ನು ನಿಮಗೆ ನೆನಪು ಮಾಡುತ್ತೇನೆ. ನನ್ನ ಗುರು ವಯಸ್ಸಾದ ಮಹಿಳೆಯೊಬ್ಬಳನ್ನು ಕೃಷ್ಣ ಭಗವಾನರ ಬಳಿಗೆ ಕರೆದೊಯ್ದು ಅವರಿಗೆ ಹೇಳಿದರು, 'ದಯವಿಟ್ಟು ಇವಳಿಗೆ ಸಹಾಯ ಮಾಡಿ. ಈಕೆ ಬಹಳ ಸಮಯದಿಂದ ಕಷ್ಟ ಪಡುತ್ತಿದ್ದಾಳೆ.' ಕೃಷ್ಣ ಭಗವಾನರು ನನ್ನ ಗುರುವಿಗೆ ಹೇಳಿದರು, 'ಇನ್ನಷ್ಟು ಸಮಯ ಈಕೆ ಕಷ್ಟವನ್ನು ಅನುಭವಿಸಲಿ.' ನನ್ನ ಗುರುವಿಗೆ ವಿವರಿಸಿದರು, 'ನಾನೀಗ ಅವಳ ಕಷ್ಟವನ್ನು ನೀಗಿದರೆ, ಅವಳ ಕರ್ಮದ ಈ ಭಾಗವನ್ನು ಕಳೆಯುವುದಕ್ಕಾಗಿ ಆಕೆ ಮತ್ತೊಂದು ಜನ್ಮವೆತ್ತಿ ಬರಬೇಕು.' ಆದ್ದರಿಂದಲೇ, 'ಅವಳು ಕಷ್ಟಪಡಲಿ,' ಎಂದು ಕೃಷ್ಣ ಹೇಳಿದ. ಆದ್ದರಿಂದ ಆ ಸಮಯದಲ್ಲಿ ಪರಿಹಾರ ನೀಡದಿದ್ದುದೇ ಒಂದು ರೀತಿಯ ಸಹಾಯವಾಗಿತ್ತು! ಕಷ್ಟವನ್ನು ನಿಭಾಯಿಸಲು ಸ್ವಲ್ಪ ಶಕ್ತಿಯನ್ನಂತೂ ಆಕೆಗೆ ನೀಡಿರುತ್ತಾನೆ. ಜ್ಯೋತಿಷಿಗಳು ಜನ್ಮ ಕುಂಡಲಿಯನ್ನು ನೋಡುತ್ತಾರೆ, ಅದು ಹುಟ್ಟಿದ ಸಮಯದಲ್ಲಿನ ಗ್ರಹಗಳ ಸ್ಥಾನವನ್ನು ಪ್ರತಿನಿಧಿಸುತ್ತದೆ. ನಂತರದ ಭಾಗದ ಬಗ್ಗೆ ಅದು ಹೆಚ್ಚು ತಿಳಿಸುವುದಿಲ್ಲ. ಋಷಿಗಳು ಜನ್ಮ ಕುಂಡಲಿಯ ನಂತರದ ಜೀವನವನ್ನೂ ಗಮನಿಸುತ್ತಾರೆ. ಅವರು ಎರಡು ಮೂರು ಜನ್ಮಗಳ ನಂತರದ ಜೀವನದ ಕಡೆಗೂ ನೋಡುತ್ತಾರೆ. ಅವರು ನಮ್ಮ ನೂರಾರು ಹಿಂದಿನ ಜನ್ಮಗಳನ್ನೂ ಗಮನಿಸುತ್ತಾರೆ. ಅವರ ದೃಷ್ಟಿಕೋನವು ಸಹಜವಾಗಿಯೇ ಬೇರೆಯದಾಗಿರುತ್ತದೆ. ಅವರ ದೃಷ್ಟಿಕೋನವೇ ಸರಿಯಾದ ದೃಷ್ಟಿಕೋನವೆಂದು ನಾನು ಹೇಳುತ್ತೇನೆ. ಆದ್ದರಿಂದ ನನಗೆ ಈ ದಿನ ಅವರು ಪರಿಹಾರ ಕೊಡದಿದ್ದರೆ ಅದನ್ನು ನಾವು ಸರಿಯೆಂದು ಒಪ್ಪಿಕೊಳ್ಳಬೇಕು, ಏಕೆಂದರೆ ಅವರಿಗದರ ಬಗ್ಗೆ ಹೆಚ್ಚು ತಿಳಿದಿದೆ. ಋಷಿಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಆದ್ದರಿಂದ ನಾವು ಋಷಿಗಳ ಬಳಿಗೆ ಹೋದಾಗ, ನಂಬಿಕೆಯಿಟ್ಟು ಸಮಸ್ಯೆಯನ್ನು ಅವರಿಗೆ ಒಪ್ಪಿಸಬೇಕು. ಋಷಿಗಳನ್ನು ಮತ್ತು ದೇವರನ್ನು ನಾವು ಅರ್ಥಮಾಡಿಕೊಳ್ಳಬೇಕಿರುವುದು ಇನ್ನೂ ಬಹಳಷ್ಟಿದೆ. ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

1–7–2018

ಇತ್ತೀಚಿನ ದಿನಗಳಲ್ಲಿ ನಮ್ಮ ವಿಚಾರಗಳನ್ನು ವ್ಯಕ್ತಪಡಿಸಲು ಹಲವಾರು ವೇದಿಕೆಗಳು ಮತ್ತು ದಾರಿಗಳು ಲಭ್ಯವಿರುವುದನ್ನು ನೀವು ಗಮನಿಸಿರಬಹುದು. ಅನೇಕರು ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಚಟುವಟಿಕೆಯಿಂದಿದ್ದಾರೆ. ಅಲ್ಲಿ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುತ್ತಾರೆ. ಬ್ಲಾಗ್‌ಗಳನ್ನು ಬರೆಯುತ್ತಾರೆ. ಸಾಮಾಜಿಕ ಜಾಲತಾಣವಲ್ಲದೆ ಇನ್ನೂ ಅನೇಕ ದಾರಿಗಳೂ ಇವೆ, ಉದಾಹರಣೆಗೆ ಮುದ್ರಣ ಮಾಧ್ಯಮ. ಜನರು ಪುಸ್ತಕಗಳನ್ನು ಬರೆದು ಪ್ರಕಟಿಸುತ್ತಾರೆ. ಇದೇ ರೀತಿ ಅನೇಕ ಮಾಧ್ಯಮಗಳಿವೆ. ಜನರು ಬೇರೆ ಬೇರೆ ಮಾಧ್ಯಮಗಳಲ್ಲಿ ತಮ್ಮ ವಿಚಾರಗಳನ್ನು ಹೇಳಿಕೊಳ್ಳುತ್ತಾರೆ. ಇವೆಲ್ಲವೂ ಸಾಧ್ಯ.

ನಮ್ಮ ವಿದ್ಯಾರ್ಥಿಗಳೂ ತಮ್ಮ ವಿಚಾರಗಳನ್ನು ಹಂಚಿಕೊಳ್ಳುತ್ತಿರಬಹುದು. ಅವರು ಬೇರೆ ಬೇರೆ ಮಾಧ್ಯಮಗಳಲ್ಲಿ ಬರೆಯುತ್ತಿರಬಹುದು. ಆಗೆಲ್ಲ ನಮ್ಮ ವಿದ್ಯಾರ್ಥಿಗಳು ತಮ್ಮ ವೈಯಕ್ತಿಕ ಮಟ್ಟದಲ್ಲಿ ಬರೆಯುತ್ತಿರುತ್ತಾರೆಂದು ಸ್ಪಷ್ಟನೆ ನೀಡಬಯಸುತ್ತೇನೆ. ಅವೆಲ್ಲವೂ ಅವರ ವಿಚಾರಗಳು, ಅವರ ಆಲೋಚನೆಗಳು ಮತ್ತು ಅವರ ಅಭಿಪ್ರಾಯಗಳು. ನಮ್ಮ ವಿದ್ಯಾರ್ಥಿಗಳಾಗಿರುವ ಒಂದೇ ಕಾರಣಕ್ಕಾಗಿ ಅವರು ಬರೆದಿದ್ದನ್ನು ಮತ್ತು ಮಾತನಾಡಿದ್ದನ್ನು ನಾವು ಅನುಮೋದಿಸುವುದಿಲ್ಲ, ಅನುಮೋದಿಸಲು ಸಾಧ್ಯವೂ ಇಲ್ಲ. ನಮ್ಮ ಅಧಿಕೃತ ವೇದಿಕೆಗಳಾದ ನಮ್ಮ ವೆಬ್‌ಸೈಟ್ ಮತ್ತು ಸಾಮಾಜಿಕ ಮಾಧ್ಯಮದ ನಮ್ಮದೇ ಖಾತೆ ಮುಂತಾದವುಗಳಲ್ಲಿನ ಬರವಣಿಗೆಗಳಿಗೆ ಮಾತ್ರ ನಾವು ಸಂಬಂಧಪಟ್ಟಿರುತ್ತೇವೆ. ನಮ್ಮ ಈ ಖಾತೆಗಳಲ್ಲಿ ಬರೆಯುವುದನ್ನು, ನಮ್ಮ ವಾರ್ತಾ ಪತ್ರಿಕೆ ಮತ್ತು ನಮ್ಮ ಪುಸ್ತಕಗಳಲ್ಲಿ ಪ್ರಕಟಿಸುವುದನ್ನು ನಾವು ಅನುಮೋದಿಸುತ್ತೇವೆ, ಅವುಗಳು ನಮಗೆ ಸಂಬಂಧಿಸಿರುತ್ತವೆ. ಬೇರೆಯವರು ಬರೆಯುವುದಕ್ಕೆ ನಾವು ಸಂಬಂಧಪಟ್ಟಿರುವುದಿಲ್ಲ, ಮತ್ತು ನಮ್ಮ ಅನುಮೋದನೆಯಿರುವುದಿಲ್ಲ. ಅದರ ಬಗ್ಗೆ ನಮ್ಮ ಅಭಿಪ್ರಾಯವನ್ನು ಕೂಡ ವ್ಯಕ್ತಪಡಿಸುವುದಿಲ್ಲ. ನಮ್ಮ ಮೌನವನ್ನು ಕೆಲವೊಮ್ಮೆ ತಪ್ಪಾಗಿ ಅರ್ಥೈಸುವ ಕಾರಣದಿಂದಾಗಿ ಈ ಸ್ಪಷ್ಟನೆ ನೀಡುತ್ತಿದ್ದೇನೆ. ಒಬ್ಬ ವ್ಯಕ್ತಿ ಇಲ್ಲಿ ಧ್ಯಾನವನ್ನು ಕಲಿಯುತ್ತಿರುವುದರಿಂದ ಆ ವ್ಯಕ್ತಿ ಹೇಳುವುದೆಲ್ಲಕ್ಕೂ ಈ ಮಾರ್ಗದ ಅನುಮೋದನೆಯಿದೆ ಮತ್ತು ಅವನ ವಿಚಾರಗಳು ನಮ್ಮ ವಿಚಾರಗಳೇ ಆಗಿವೆ ಎಂದು ಜನರು ತಪ್ಪಾಗಿ ಅರ್ಥಮಾಡಿಕೊಳ್ಳಬಹುದು. ಆದರೆ ಅದು ಹಾಗಲ್ಲ. ಈ ವಿಚಾರ ಎಲ್ಲರಿಗೂ ಅರ್ಥವಾಗಿದೆಯೆಂದು ಭಾವಿಸುತ್ತೇನೆ.

ನಮ್ಮ ಅಧಿಕೃತ ವೇದಿಕೆಗಳಲ್ಲಿ, ಅಧಿಕೃತ ಚಾನಲ್‌ಗಳಲ್ಲಿ ಏನನ್ನೇ ಪೋಸ್ಟ್ ಮಾಡುವಾಗ ನಾವು ಎಚ್ಚರಿಕೆ ವಹಿಸುತ್ತೇವೆ, ಏಕೆಂದರೆ ಜನರು ಅದನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತಾರೆಂದು ನಮಗೆ ತಿಳಿದಿದೆ. ಅವು ಋಷಿಗಳಿಂದ ಬಂದದ್ದೆಂದು ತಿಳಿದಿರುವುದರಿಂದ ಜನರು ಅವನ್ನು ಗಂಭೀರವಾಗಿ ಪರಿಗಣಿಸುತ್ತಾರೆ. ನಾವು ಹೇಳಿದ್ದೆಲ್ಲವನ್ನೂ ಆಚರಿಸಲಾರಂಭಿಸುತ್ತಾರೆ. ಆ ಕಾರಣದಿಂದಾಗಿಯೇ ನಾವು ಇನ್ನೂ ಹೆಚ್ಚು ಎಚ್ಚರಿಕೆ ವಹಿಸುತ್ತೇವೆ. ಗುರೂಜಿಯವರು ನಮಗೆ ಕೊಟ್ಟ ಪರಿಶುದ್ಧ ಜ್ಞಾನವನ್ನು ತಿರುಚದಿರುವಂತೆ ಬಹಳ ಜವಾಬ್ದಾರಿಯಿಂದಿರಬೇಕು. ಬಹಳ ಎಚ್ಚರಿಕೆ ವಹಿಸಿ, ನಾವಿಲ್ಲಿ ಗುರೂಜಿಯವರಿಂದ ಕಲಿತದ್ದನ್ನು ಮಾತ್ರವೇ ಪೋಸ್ಟ್ ಮಾಡುತ್ತೇವೆ. ಬಹುತೇಕ ಪೋಸ್ಟಿಂಗ್‌ಗಳು ಗುರೂಜಿಯವರು ಸ್ವತಃ ಹೇಳಿದ್ದು ಅಥವ ಬರೆದದ್ದೇ ಆಗಿರುತ್ತವೆ.

ಇಲ್ಲಿ ಧ್ಯಾನ ಕಲಿಯುತ್ತಿರುವ ಕೆಲವರು, ಕೆಲವು ಜನರಿಗೆ ಮಾರ್ಗದರ್ಶನವನ್ನೂ ಮಾಡುತ್ತಿರಬಹುದು. ಅವರ ಚಟುವಟಿಕೆಗಳೊಂದಿಗೆ ನಮಗೆ ಯಾವುದೇ ಸಂಬಂಧವಿಲ್ಲ. ಇಲ್ಲಿನ ತರಗತಿಗಳಲ್ಲಿ ಮತ್ತು ಬೆಂಗಳೂರಿನ ಇತರ ಕೇಂದ್ರಗಳಲ್ಲಿ ನಾವು ಧ್ಯಾನ ಕಲಿಸುತ್ತೇವೆ. ದೂರ ಕಲಿಕೆಯ ವಿದ್ಯಾರ್ಥಿಗಳಿಗೆ ಇಮೇಲ್ ಮುಖಾಂತರ ಅಥವ ಅವರಿಗೆ ನೇರವಾಗಿ ಪತ್ರ ಬರೆಯುವ ಮೂಲಕ ಧ್ಯಾನ ಕಲಿಸುತ್ತೇವೆ. ಶಾಲೆಗಳಲ್ಲಿ ಲೈಟ್ ಚಾನಲಿಂಗ್ ಕಲಿಸುತ್ತೇವೆ. ಆದರೆ ಖಾಸಗಿಯಾಗಿ ಯಾರಾದರೂ ಕಲಿಸುತ್ತಿದ್ದರೆ, ನಮಗೆ ಅವರೊಂದಿಗೆ ಯಾವುದೇ ರೀತಿಯ ಸಂಬಂಧವಿಲ್ಲ. ಈ ಜನರು ಕೊಡುವ ತಂತ್ರಗಳು(techniques) ನಾವು ಕೊಡುವ ತಂತ್ರಗಳಂತೆಯೇ ಕಾಣಬಹುದು. ಅದರ ಬಗ್ಗೆ ನಮಗೆ ತಿಳಿದಿರುವುದಿಲ್ಲ. ಇಲ್ಲಿ ಕೊಡುವ ತಂತ್ರಗಳು ಋಷಿಗಳಿಂದ ಬಂದಿವೆ ಮತ್ತು ಅವು ಬಹಳ ಪವಿತ್ರವಾದವುಗಳೆಂದು ನಮಗಿಲ್ಲಿ ತಿಳಿದಿದೆ. ಋಷಿಗಳ ಅಪಾರ ಪ್ರಯತ್ನದಿಂದಾಗಿ ಈ ತಂತ್ರಗಳು ಹೊರಬಂದಿವೆ. ಸಾವಿರಾರು ವರ್ಷಗಳ ತಪಸ್ಸಿನ ನಂತರ ದೇವರಿಂದ ಅಥವ ನೇರ ಗ್ರಹಿಕೆಯಿಂದ ಋಷಿಗಳು ಈ ತಂತ್ರಗಳನ್ನು ಪಡೆಯುತ್ತಾರೆಂದು ಗುರೂಜಿಯವರು ಹೇಳುತ್ತಿದ್ದರು. ನಂತರ ಈ ತಂತ್ರಗಳನ್ನು, ಬಹಳ ಕಾಲದವರೆಗೆ ಸ್ವತಃ ಅವರೇ ಅಭ್ಯಾಸ ಮಾಡುತ್ತಾರೆ. ಅದರ ಪರಿಣಾಮಗಳನ್ನು ಗಮನಿಸಿದ ನಂತರವಷ್ಟೇ, ಈ ತಂತ್ರಗಳನ್ನು ಮನುಕುಲಕ್ಕೆ ಕೊಡುತ್ತಾರೆ. ಹೀಗಿರುವಾಗ, ಈ ತಂತ್ರಗಳನ್ನು ಬದಲಾವಣೆ ಮಾಡುವುದಾದರೂ ಹೇಗೆ? ಅವು ಬಹಳ ಪವಿತ್ರವಾದ ಮಹಾನ್ ತಂತ್ರಗಳು. ಅವುಗಳಲ್ಲಿ ಬದಲಾವಣೆ ತರುವ ಅವಶ್ಯಕತೆ ನಮಗಿಲ್ಲ. ಅವು ಬಹಳ ಸರಳವಾಗಿ ಕಂಡರೂ ಅತ್ಯಂತ ಆಧುನಿಕವಾದವುಗಳು. ನಿಮಗೆ ಕೊಡುವ ಈ ತಂತ್ರಗಳು ಕೇವಲ ನಿಮಗಾಗಿಯೇ, ಇವುಗಳನ್ನು ಬೇರೆಯವರಿಗೆ ಹೇಳಬಾರದು. ಸತ್ಯಯುಗವನ್ನು ಪ್ರವೇಶಿಸುವವರೆಗೂ ಈ ತಂತ್ರಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲವೆಂದು ಗುರೂಜಿಯವರು ಬಹಳ ಸ್ಪಷ್ಟವಾಗಿ ಹೇಳಿದ್ದರು. ಹಾಗೂ, ಒಮ್ಮೆ ನಾವು ಸತ್ಯಯುಗವನ್ನು ಪ್ರವೇಶಿಸಿದೆವೆಂದರೆ ಧ್ಯಾನದ ಅವಶ್ಯಕತೆಯಿರುವುದಿಲ್ಲ. ಆದ್ದರಿಂದ ಈ ವಿಷಯಗಳ ಬಗ್ಗೆ ನಾವು ಬಹಳ ಎಚ್ಚರಿಕೆಯಿಂದಿರಬೇಕು.

ದೀಕ್ಷೆಯ(initiation) ಬಗ್ಗೆಯೂ ನಾನು ಸ್ಪಷ್ಟನೆ ನೀಡಬಯಸುತ್ತೇನೆ. ಇಲ್ಲಿ ದೀಕ್ಷೆ ನೀಡುವವರು ಋಷಿಗಳು. ನಾವು ದೀಕ್ಷೆ ಕೊಡುವುದಿಲ್ಲ, ಕೊಡಲು ಸಾಧ್ಯವೂ ಇಲ್ಲ. ಅಂತಹ ಸಾಮರ್ಥ್ಯ ನಮಗಿಲ್ಲ. ಕೇವಲ ಋಷಿಗಳು ನೀಡಬಲ್ಲರು. ಅವರಲ್ಲಿ ಅಷ್ಟೊಂದು ಚೈತನ್ಯಗಳ ಭಂಡಾರವಿದೆ. ಅವರು ಸೂಕ್ಷ್ಮ ಮಟ್ಟದಲ್ಲಿ ದೀಕ್ಷೆ ನೀಡುತ್ತಾರೆ. ಭೌತಿಕ ಮಟ್ಟದಲ್ಲಿ, ನಮ್ಮ ಶಿಕ್ಷಕರು ದೀಕ್ಷೆಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ. ನಾವು ತಂತ್ರದ ವಿವರಣೆಯನ್ನಷ್ಟೇ ಕೊಡುತ್ತೇವೆ. ದೂರಕಲಿಕೆಯ ವಿದ್ಯಾರ್ಥಿಗಳಿಗೂ ಋಷಿಗಳು ಸೂಕ್ಷ್ಮ ಮಟ್ಟದಲ್ಲಿ ದೀಕ್ಷೆ ನೀಡುತ್ತಾರೆ. ದೀಕ್ಷೆ ಅಪಾರ ಪ್ರೀತಿಯಿಂದ ಮಾಡುವ ಕಾರ್ಯ, ಅದರಲ್ಲಿ ವ್ಯವಹಾರಕ್ಕೆ ಅವಕಾಶವಿಲ್ಲ. ದೀಕ್ಷೆಯು ಷರತ್ತುರಹಿತ ಪ್ರೀತಿಯ ಮೇಲೆ ನಿಂತಿರುವ ಒಂದು ಪ್ರಕ್ರಿಯೆ.

ಋಷಿಗಳು ಸಾವಿರಾರು ವರ್ಷಗಳು ತಪಸ್ಸಿನಲ್ಲಿ ಕುಳಿತು ಚೈತನ್ಯಗಳನ್ನು ಸಂಗ್ರಹಿಸಿದ ನಂತರ ತಪಸ್ಸಿನಿಂದ ಹೊರಬಂದು ಈ ಪ್ರಪಂಚದಲ್ಲಿ ಬದುಕುತ್ತಾ ತಮ್ಮ ತಪಶ್ಶಕ್ತಿಯನ್ನು ವಿದ್ಯಾರ್ಥಿಗಳಿಗೆ ಮತ್ತು ಜನರಿಗೆ ಹರಿಸುತ್ತಾರೆ. ಅವರ ಚೈತನ್ಯಗಳನ್ನು ಜಗತ್ತಿನ ಕಲ್ಯಾಣಕ್ಕಾಗಿಯೂ ಬಳಸುತ್ತಾರೆ. ಆ ರೀತಿಯಲ್ಲಿ ಅವರು ತಪಶ್ಶಕ್ತಿಯನ್ನು ಬರಿದುಮಾಡುತ್ತಾರೆ. ಅವರು ಇಲ್ಲಿ ಜೀವಿಸಿದ್ದಾಗ, ಮತ್ತೊಂದು ತಂಡ ತಪಸ್ಸಿನಲ್ಲಿ ಕುಳಿತು ಚೈತನ್ಯಗಳನ್ನು ಸಂಗ್ರಹಿಸುತ್ತದೆ. ಇಲ್ಲಿ ಜೀವಿಸಿರುವ ಋಷಿಗಳ ತಪಶ್ಶಕ್ತಿಯು ಸಂಪೂರ್ಣವಾಗಿ ಬರಿದಾದಾಗ ಅವರು ಮತ್ತೊಮ್ಮೆ ತಪಸ್ಸಿನಲ್ಲಿ ಕುಳಿತುಕೊಳ್ಳುತ್ತಾರೆ. ತಪಸ್ಸನ್ನಾಚರಿಸುತ್ತಿರುವ ಮತ್ತೊಂದು ತಂಡದ ಋಷಿಗಳು ಹಿಂದಿರುಗಿ ಬಂದು ಇಲ್ಲಿ ಜೀವಿಸುವುದು ಆ ಸಮಯದಲ್ಲೇ. ಈ ರೀತಿಯಲ್ಲಿ, ಷರತ್ತುರಹಿತ ಪ್ರೀತಿಯ ಮೇಲೆ ಮಾತ್ರವೇ ನೆಲೆನಿಂತಿರುವ ಋಷಿಗಳ ಕಾರ್ಯವು ತುಂಬಾ ವ್ಯವಸ್ಥಿತವಾಗಿ ಮುಂದುವರಿಯುತ್ತದೆ. ಆದ್ದರಿಂದ ದೀಕ್ಷೆಯು ಬಹಳ ಪವಿತ್ರವಾದ ಪ್ರಕ್ರಿಯೆ. ಯಾರಾದರೂ ದೀಕ್ಷೆಗಾಗಿ ಹಣ ತೆಗೆದುಕೊಳ್ಳುತ್ತಿದ್ದರೆ, ಖಂಡಿತವಾಗಿಯೂ ಅವರೊಂದಿಗೆ ನಮ್ಮ ಸಂಬಂಧವಿರುವುದಿಲ್ಲ. ಅದು ಋಷಿಗಳ ಮಾರ್ಗವಲ್ಲ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫ್ಲೀಯು ರೂ. 4500. ಈ ಫ್ಲೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀಯು ರೂ. 3500. ಈ ಫ್ಲೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು 'Manasa Light Age Foundation' ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

1–7–2018

ಅತ್ಯುನ್ನತ ಮಟ್ಟದಲ್ಲಿ ಭಾವಿಸುವ ಮತ್ತು ಆಲೋಚಿಸುವ ಶಕ್ತಿ ನಮ್ಮಲ್ಲಿ ಪ್ರತಿಯೊಬ್ಬರಿಗೂ ಇದೆ. ಬಹಳ ಸಕಾರಾತ್ಮಕರಾಗಿರುವ ಮತ್ತು ಸಹಾನುಭೂತಿಯಿಂದಿರುವ ಸಾಮರ್ಥ್ಯ ನಮ್ಮಲ್ಲಿ ಪ್ರತಿಯೊಬ್ಬರಿಗೂ ಇದೆ. ಒಳ್ಳೆಯತನ, ಪ್ರಾಮಾಣಿಕತೆ, ಪ್ರೀತಿ ಮತ್ತು ಸಕಾರಾತ್ಮಕವಾದ ಎಲ್ಲವನ್ನೂ ಅಭಿವ್ಯಕ್ತಿಸುವ ಶಕ್ತಿ ನಮ್ಮೆಲ್ಲರಲ್ಲೂ ಇದೆ. ನಿಜವಾಗಿಯೂ ಆಧ್ಯಾತ್ಮಿಕರಾಗಿ ಬಾಳುವ ಸಾಮರ್ಥ್ಯವು ನಮ್ಮೆಲ್ಲರಿಗೂ ಇದೆ. ಈ ಸಾಮರ್ಥ್ಯವು ನಮ್ಮ ಮೂಲದಿಂದ ಅಂದರೆ ಆತ್ಮದಿಂದ ಬರುತ್ತದೆ. ವಾಸ್ತವದಲ್ಲಿ ನಾವೇ ಆತ್ಮ. ಪ್ರೀತಿ ನಮ್ಮ ಸ್ವಭಾವ. ಸಕಾರಾತ್ಮಕತೆ ನಮ್ಮ ಸ್ವಭಾವ. ನಮ್ಮ ನೈಜ ಸಾಮರ್ಥ್ಯ ಮತ್ತು ಸ್ವಭಾವದಂತೆ ಬಾಳುವ ಪ್ರಯತ್ನವೇ ಸಾಧನೆ. ದಿನದ 24 ಗಂಟೆಯೂ ನಮ್ಮ ನೈಜ ಸ್ವಭಾವದಂತೆ ಬದುಕುವುದೇ ಯೋಗ ಎಂದು ಗುರೂಜಿಯವರು ಹೇಳಿದ್ದರು.

ಸಾಮಾನ್ಯವಾಗಿ ನಮ್ಮ ಜೀವನದಲ್ಲಿ ಸಕಾರಾತ್ಮಕ ಬಾಳನ್ನು ನಡೆಸುವ ಸಮಯಗಳೂ ಇರುತ್ತವೆ. ಷರತ್ತುರಹಿತ ಪ್ರೀತಿಯ ಆಧಾರದ ಮೇಲೆ ನಾವು ಕಾರ್ಯ ನಿರ್ವಹಿಸುತ್ತೇವೆ. ನಾವೂ ನಗುತ್ತಾ ಇತರರಿಗೂ ನಗುತ್ತಾ ಬಾಳಲು ಸಹಕರಿಸುತ್ತೇವೆ. ಇಂತಹ ಚಟುವಟಿಕೆಗಳಲ್ಲಿದ್ದಾಗಲೆಲ್ಲಾ ನಾವು ನಮ್ಮ ಸ್ವಭಾವದಂತೆಯೇ ಬಾಳುತ್ತಿರುತ್ತೇವೆ. ನಮ್ಮಲ್ಲಿನ ದೈವತ್ವವನ್ನು ಅಭಿವ್ಯಕ್ತಿಸುತ್ತಿರುತ್ತೇವೆ. ನಮ್ಮ ಮೂಲದಲ್ಲಿರುವ ದೈವತ್ವದಿಂದಲೇ ಎಲ್ಲ ಸಕಾರಾತ್ಮಕತೆಯೂ ಹೊರಹೊಮ್ಮುತ್ತದೆ. ನಾವು ಅಂತಹ ಸಕಾರಾತ್ಮಕ ಕಾರ್ಯಗಳಲ್ಲಿ ತೊಡಗಿದ್ದಾಗ ದೇವರ ಸಂಪರ್ಕದಲ್ಲಿರುತ್ತೇವೆ. ನಮ್ಮ ಕಾರ್ಯಗಳು, ನಮ್ಮ ಆಲೋಚನೆಗಳು ಮತ್ತು ನಮ್ಮ ಭಾವನೆಗಳ ಮೂಲಕ ಅವನ ಚೈತನ್ಯಗಳನ್ನು ಹರಡುತ್ತಿರುತ್ತೇವೆ. ಅಂತಹ ಸಮಯಗಳಲ್ಲಿ ಅವನ ಬೆಳಕನ್ನು ಹರಡುತ್ತಿರುತ್ತೇವೆ ಮಾತ್ರವಲ್ಲದೇ ಆ ಕ್ಷಣಗಳಲ್ಲಿ ನಾವೇ ಬೆಳಕಾಗುತ್ತೇವೆ ಎಂದೂ ಹೇಳಬಹುದೆನ್ನುವುದು ನನ್ನ ಅನಿಸಿಕೆ. ಸಂಪೂರ್ಣವಾಗಿ ಸಕಾರಾತ್ಮಕರಾಗಿದ್ದ ಕ್ಷಣಗಳಲ್ಲಿ ಮತ್ತು ಷರತ್ತುರಹಿತ ಪ್ರೀತಿಯಿದ್ದ ಕ್ಷಣಗಳಲ್ಲಿ ನಾವು ಬೆಳಕೇ ಆಗಿರುತ್ತೇವೆ. ಬೆಳಕಿನ ಪರಿಪೂರ್ಣ ಚಾನಲ್ ಆಗುತ್ತೇವೆ. ದಿನದ 24 ಗಂಟೆಯೂ ಬೆಳಕಿನ ಚಾನಲ್ ಆಗಿಯೇ ಉಳಿಯುವುದು ಸಾಧನೆ. ಹೀಗಿರಲು ಸಾಧ್ಯವಾದಾಗ ನಾವು ಯೋಗದಲ್ಲಿದ್ದೇವೆಂದು ಹೇಳಬಹುದು. ಇಂತಹ ಕಾರ್ಯಗಳಲ್ಲಿ ನಾವು ತೊಡಗಿಕೊಂಡಿದ್ದಾಗ ನಮ್ಮಲ್ಲಾಗುವ ವಿಸ್ತರಣೆಯ ಮತ್ತು ಆನಂದದ ಅನುಭವವನ್ನು ನಾವು ಗಮನಿಸಬಹುದು. ಆಗೆಲ್ಲಾ ನಾವು ದೇವರೊಂದಿಗೆ ಇರುವ ಕಾರಣದಿಂದಾಗಿ ಆನಂದದ ತರಂಗಗಳನ್ನು ಹೊರಹೊಮ್ಮಿಸುತ್ತಿರುತ್ತೇವೆ ಮತ್ತು ದೇವರೊಂದಿಗಿರುವಾಗ ಆನಂದದಿಂದಿರಲು ಮಾತ್ರವೇ ಸಾಧ್ಯ.

ಹಾಗಿದ್ದರೂ ನಾವು ಆ ರೀತಿ ಬಾಳಲಾಗದ ಸಮಯಗಳೂ ಇರುತ್ತವೆ. ನಾವು ಕೋಪ ಪ್ರಕಟಿಸಬಹುದು, ನಕಾರಾತ್ಮಕವಾಗಿ ವರ್ತಿಸಬಹುದು, ಅಸಂತೋಷವನ್ನು ಹರಡಬಹುದು. ನಾವು ಈ ರೀತಿ ನಡೆದುಕೊಂಡಾಗ ಸಹಜವಾಗಿಯೇ ನಮ್ಮ ಸ್ವಧರ್ಮವನ್ನು ಅಭಿವ್ಯಕ್ತಿಸುತ್ತಿರುವುದಿಲ್ಲ. ವಾಸ್ತವದಲ್ಲಿ ನಾವು ನಮ್ಮ ಸ್ವಧರ್ಮಕ್ಕೆ ವಿರುದ್ಧವಾಗಿಯೇ ವರ್ತಿಸುತ್ತಿರುತ್ತೇವೆ. ಆಗ ಅಪ್ರೀತಿಯನ್ನು ಹರಡುವ ಸಾಧ್ಯತೆಯಿದೆ. ಹಾಗೆ ನಡೆದುಕೊಂಡ ಕ್ಷಣಗಳಲ್ಲಿ ದುಷ್ಟ ಚೈತನ್ಯಗಳನ್ನು ಹರಡಲು ಪ್ರಾರಂಭಿಸುತ್ತೇವೆಂದು ಹೇಳಬಹುದು. ನಾವು ಆ ಕ್ಷಣಗಳಲ್ಲಿ ದುಷ್ಟತೆಗೆ ಸಂಪರ್ಕಗೊಳ್ಳುತ್ತೇವೆ ಹಾಗೂ ಸಹಜವಾಗಿಯೇ ಬೆಳಕಿನ ಸಂಪರ್ಕವನ್ನು ಕಳೆದುಕೊಳ್ಳುತ್ತೇವೆ. ಅಂತಹ ನಕಾರಾತ್ಮಕ ಕಾರ್ಯಗಳಲ್ಲಿ ತೊಡಗಿಕೊಂಡಿದ್ದಾಗ ನಾವು ದುಃಖಿತರಾಗಿರುವುದನ್ನು ನಾವೇ ಗಮನಿಸಿ ಕೊಳ್ಳಬಹುದು. ದೇವರ ಸಂಪರ್ಕವಿಲ್ಲದ ಕಾರಣ ನಾವು ಬಹಳ ಅಸಂತೋಷದಿಂದ ಕೂಡಿರುತ್ತೇವೆ. ಅವನ ಸಂಪರ್ಕವಿಲ್ಲದಿದ್ದಾಗ ನಾವು ಸಂತೋಷದಿಂದಿರುವುದಾದರೂ ಹೇಗೆ? ಹೇಗೇ ಇರಲಿ, ಸಾಧನೆಯೆಂದರೆ, ಅಂತಹ ಕ್ಷಣಗಳು ನಮ್ಮ ಬದುಕಿನಲ್ಲಿ ಇಲ್ಲದಿರುವಂತೆ ನೋಡಿಕೊಳ್ಳುವುದು. ಅದಕ್ಕಾಗಿಯೇ ನಾವಿಲ್ಲಿ ಸೇರುತ್ತೇವೆ. 24ಗಂಟೆಗಳೂ ಸಕಾರಾತ್ಮಕವಾಗಿ ಬಾಳಲು ಸಾಧ್ಯವಾಗುವಂತಾಗಲು ನಾವಿಲ್ಲಿ ಸೇರುತ್ತೇವೆ.

ಧ್ಯಾನದಲ್ಲಿ ನಾವು ದೇವರಿಗೆ ಸಂಪರ್ಕಗೊಂಡು ಅವನನ್ನು ಅನುಭವಿಸುತ್ತೇವೆ. ಅವನ ಅನುಭವ ಬೇರೆ ಬೇರೆ ಪ್ರಮಾಣದಲ್ಲಾಗಬಹುದು. ಅವನನ್ನು ಕ್ಷಣಕಾಲ ಅನುಭವಿಸುತ್ತೇವೆ. ಅವನ ಹತ್ತಿರಕ್ಕೆ ಹೋಗುತ್ತೇವೆ ಅಥವ ಅವನನ್ನು ಮುಟ್ಟುತ್ತೇವೆ ಎಂದು ಹೇಳಬಹುದು. ನಮ್ಮ ಅರಿವು ಈ ದೇಹ, ಮನಸ್ಸು ಮತ್ತು ಬುದ್ಧಿಯನ್ನು ದಾಟಿದ ಕೆಲ ಕ್ಷಣಗಳಲ್ಲಿ ನಾವು ಅವನನ್ನು ಮುಟ್ಟುತ್ತೇವೆ ಮತ್ತು ಅನುಭವಿಸುತ್ತೇವೆ. ನಾವು ಸಾಧನೆಯಲ್ಲಿ ಮುಂದುವರೆದಂತೆಲ್ಲಾ ಅವನನ್ನು ಅನುಭವಿಸುವ ಈ ಕ್ಷಣಗಳು ಸಹಜವಾಗಿಯೇ ಹೆಚ್ಚಾಗುತ್ತವೆ. ಅವನನ್ನು ಹೆಚ್ಚು ಕಾಲ ಅನುಭವಿಸಲು ಸಾಧ್ಯವಾಗುತ್ತದೆ. ಧ್ಯಾನದಿಂದ ಹೊರಬಂದ ನಂತರವೂ, ದೇವರ ಸಂಪರ್ಕದಲ್ಲಿದ್ದ ಈ ಅನುಭವದ ಪ್ರಭಾವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಬಾಳು ನಡೆಸುವಾಗಲೂ ಈ ಪ್ರಭಾವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಈ ಪ್ರಭಾವವನ್ನು 24 ಗಂಟೆಗಳೂ ಉಳಿಸಿಕೊಳ್ಳುವುದೇ ನಮ್ಮ ಗುರಿ; ಸದಾ ಕಾಲವೂ ದೇವರ ಜೊತೆಯಿರುವುದೇ ನಮ್ಮ ಗುರಿ. ಆಗ ಇಡೀ ಜೀವನವೇ ಯೋಗವಾಗುತ್ತದೆ. 'ಇಡೀ ಜೀವನವೇ ಯೋಗ,' ಎಂದು ಮಹರ್ಷಿ ಅರಬಿಂದೋ ಹೇಳಿದ್ದರು. ನಾನು ಹೇಳಿದ ಈ ಎಲ್ಲ ವಿಷಯಗಳನ್ನೂ ಗುರೂಜಿಯವರು ವಿವರಿಸಿದ್ದರು. ನಾವು ಇವೆಲ್ಲವನ್ನೂ ಬೌದ್ಧಿಕ ಮಟ್ಟದಲ್ಲಿ ಸುಲಭವಾಗಿ ಅರ್ಥಮಾಡಿಕೊಳ್ಳುತ್ತೇವೆ, ಆದರೆ ಇವನ್ನು ಆಚರಣೆಗೆ ತರುವುದೇ ಸಾಧನೆ. ■

## ಪ್ರಶ್ನೋತ್ತರಗಳು

**ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ**

**ಪ್ರ: ದೇವರ ಅಸ್ತಿತ್ವದ ಉದ್ದೇಶವೇನು?**

ಉ: ದೇವರ ಬಗ್ಗೆ ನಮಗೆ ಬಹಳ ಕಡಿಮೆ ತಿಳಿದಿದೆ. ನಿಜವಾಗಿಯೂ ನಿಮಗೆ ದೇವರ ಅಸ್ತಿತ್ವದ ಉದ್ದೇಶ ತಿಳಿದುಕೊಳ್ಳಬೇಕೆನಿಸಿದರೆ, ವಿಶ್ಲೇಷಣೆಯ ಬದಲಿಗೆ ಅಥವಾ ತಾರ್ಕಿಕವಾಗಿ ಅರ್ಥ ಮಾಡಿಕೊಳ್ಳುವ ಪ್ರಯತ್ನದ ಬದಲಿಗೆ, ಧ್ಯಾನ ಮಾಡಿ ಅವನನ್ನು ಅನುಭವಿಸುವ ಪ್ರಯತ್ನ ಮಾಡಿ. ಬಹುಶಃ ಅನುಭವದಲ್ಲಿ, ತಾನೇಕೆ ಅಸ್ತಿತ್ವದಲ್ಲಿದ್ದೇನೆಂದು ದೇವರೇ ನಿಮಗೆ ತಿಳಿಸಬಹುದು. "ನಾನೇಕೆ ಅಸ್ತಿತ್ವದಲ್ಲಿದ್ದೇನೆ?" ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುವ ಮೂಲಕ ಪ್ರಾರಂಭಿಸಬಹುದು. ಇದು ಹೆಚ್ಚು ಸಹಾಯಕ.

**ಪ್ರ: ಬೆಳಕಿನ ಯುಗವನ್ನು ಪ್ರವೇಶಿಸುವ ಮೊದಲೇ ಜನರು ಪರಿವರ್ತನೆ ಹೊಂದಬೇಕೆಂದು ನಿರೀಕ್ಷಿಸಲಾಗುತ್ತದೆ. ಹಾಗಾದರೆ ಬೆಳಕಿನ ಯುಗದ ಬಗ್ಗೆ ಅರಿವಿಲ್ಲದ ಜನರಿಗೆ ಏನಾಗುತ್ತದೆ?**

ಉ: ಬೇರೊಂದು ಮಟ್ಟದಲ್ಲಿ ಪ್ರತಿಯೊಬ್ಬರಿಗೂ ಮಾರ್ಗದರ್ಶನ ಮತ್ತು ಸಹಾಯ ದೊರೆಯುತ್ತದೆ. ಎಲ್ಲಿಯೇ ಆದರೂ, ಜನರು ಸಣ್ಣ ಅಥವಾ ದೊಡ್ಡ ತಂಡಗಳಲ್ಲಿ ಒಟ್ಟುಗೂಡಿದಾಗ, ಋಷಿಗಳು ಅಲ್ಲಿಗೆ ಚೈತನ್ಯಗಳನ್ನು ಕಳುಹಿಸುತ್ತಾರೆ. ಬೆಳಕಿನ ಯುಗದ ಬಗ್ಗೆ ಅರಿವಿಲ್ಲದ ಜನರನ್ನೂ ಸಹ ಋಷಿಗಳು ಸೂಕ್ಷ್ಮ ಮಟ್ಟದಲ್ಲಿ ಭೇಟಿ ಮಾಡುತ್ತಾರೆ. ಭೌತಿಕ ಮಟ್ಟದಲ್ಲಿ ಅವರಿಗೆ ಈ ವಿಷಯಗಳ ಬಗ್ಗೆ ಅರಿವಿಲ್ಲದಿರಬಹುದು, ಆದರೆ ಬೇರೊಂದು ಮಟ್ಟದಲ್ಲಿ ಅವರಿಗೆ ಅರಿವಿರುತ್ತದೆ. ಸಮಯ ಬಂದಾಗ, ಪರಿವರ್ತನೆಯ ಪ್ರಾಮುಖ್ಯತೆಯ ಬಗ್ಗೆ ತಿಳಿದುಕೊಳ್ಳುತ್ತಾರೆ, ಮತ್ತು ಬೆಳಕಿನ ಯುಗವನ್ನು ಪ್ರವೇಶಿಸಲು ಅರ್ಹರಾಗುವ ಅವಶ್ಯಕತೆಯ ಬಗ್ಗೆಯೂ ತಿಳಿದುಕೊಳ್ಳುತ್ತಾರೆ.

**ಪ್ರ: ನೀವು ಸ್ವಾತಂತ್ರ್ಯದ ಬಗ್ಗೆ ಮಾತನಾಡುವುದಿಲ್ಲ. ನೀವು ಯಾವಾಗಲೂ ಋಷಿಗಳಿಗೆ ಮತ್ತು ದೇವರಿಗೆ ಶರಣಾಗುವ ಬಗ್ಗೆ ಮಾತನಾಡುತ್ತೀರಿ. ದಯಮಾಡಿ ಇದಕ್ಕೆ ಪ್ರತಿಕ್ರಿಯಿಸಿ.**

ಉ: ನನ್ನ ಗುರು ಯಾವಾಗಲೂ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತಿದ್ದರು. 1988ನೇ ಇಸವಿಯಿಂದ, ಧ್ಯಾನ ತರಗತಿಗಳನ್ನು ಪ್ರಾರಂಭಿಸಿದ ದಿನದಿಂದ, ನಾನು ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತಲೇ ಇದ್ದೇನೆ. ಸ್ವಾತಂತ್ರ್ಯದಲ್ಲಿ ಮಾತ್ರವೇ ನಾವು ಬೆಳೆಯುತ್ತೇವೆ. ಸತ್ಯ ಸಂಗತಿಯೆಂದರೆ, ನಾವು ಸ್ವತಂತ್ರರಾಗಿದ್ದಾಗ ಮಾತ್ರ, ಋಷಿಗಳಿಗೆ ಮತ್ತು ದೇವರಿಗೆ ಶರಣಾಗಬಹುದು.

**ಪ್ರ: ಮನಸ್ಸು ಒಂದು ಸೂಕ್ಷ್ಮ ವಸ್ತುವೇ?**

ಉ: ಮನಸ್ಸು ಸೂಕ್ಷ್ಮ ವಸ್ತುವಿನಿಂದಾದ ಒಂದು ಪದಾರ್ಥ ಅಥವ ಅಸ್ತಿತ್ವ(entity). ಅದು ಸ್ವತಂತ್ರವಾಗಿ ಕೆಲಸ ಮಾಡುತ್ತದೆ. ಅದು ತನ್ನದೇ ಆದ ಸ್ವಂತ ಬುದ್ಧಿಶಕ್ತಿಯನ್ನು ಹೊಂದಿದೆ. ಮನಸ್ಸಿನ ವಸ್ತು ದಿವ್ಯ ಲೋಕವಾದ ಬ್ರಹ್ಮ ಲೋಕದಲ್ಲಿ ಲಭ್ಯವಿರುತ್ತವೆ.

**ಪ್ರ: ತಪೋನಗರದಲ್ಲಿ ಅಗಾಧವಾದ ಜ್ಞಾನ ಸಂಪತ್ತಿನ ಸಂಗ್ರಹವಿದ್ದರೂ, ಅದರ ಪ್ರಯೋಜನ ಪಡೆದುಕೊಳ್ಳುವುದಕ್ಕೆ ನಮಗೇಕೆ ಸಾಧ್ಯವಾಗಿಲ್ಲ?**

ಉ: ಬಹುಶಃ ನಾವು ಪ್ರಾಪಂಚಿಕ ವಿಷಯಗಳಲ್ಲೇ ಹೆಚ್ಚು ಮುಳುಗಿರಬಹುದು. ಬಹುಶಃ ಹೆಚ್ಚಿನ ಜ್ಞಾನ ಪಡೆದುಕೊಳ್ಳುವುದಕ್ಕೆ ನಮಗೆ ಉತ್ಸಾಹ ಇಲ್ಲದಿರಬಹುದು. ಮತ್ತು ದಿನನಿತ್ಯದ ಜೀವನದಲ್ಲಿ ಅವುಗಳನ್ನು ಅಳವಡಿಸಿಕೊಳ್ಳಲು ನಮಗೆ ತಿಳಿದಿಲ್ಲದಿರಬಹುದು. ಈ ರೀತಿಯ ಇನ್ನೂ ಅನೇಕ ಕಾರಣಗಳಿರಬಹುದು. ಒಂದು ವೇಳೆ ಯಾರಾದರೂ ತಿಳಿದುಕೊಳ್ಳಬಯಸಿದರೆ, ಅವರು ತಿಳಿದುಕೊಳ್ಳುವುದಕ್ಕೆ ಮತ್ತು ಕಲಿಯುವುದಕ್ಕೆ ಎಲ್ಲ ರೀತಿಯ ಪ್ರಯತ್ನಗಳನ್ನೂ ಮಾಡುತ್ತಾರೆ.

**ಪ್ರ: ಕೆಲವೊಮ್ಮೆ ಕೋಪ ಮಾಡಿಕೊಳ್ಳುವುದು ಸರಿಯೇ?**

ಉ: ಹೌದು. ಕೆಲವೊಮ್ಮೆ ನಾವು ಕೋಪ ಮಾಡಿಕೊಳ್ಳಬೇಕು – ಭ್ರಷ್ಟಾಚಾರದ ಬಗ್ಗೆ ಕೋಪ, ಅನ್ಯಾಯದ ವಿರುದ್ಧ ಕೋಪ, ಹುಸಿತನದ ಬಗ್ಗೆ ಮತ್ತು ತಪ್ಪುಗಳನ್ನು ಮಾಡಿದಾಗ ಕೋಪ ಮಾಡಿಕೊಳ್ಳಬೇಕು. ಆದರೆ ಕೋಪ ಮೇಲಿನ ಮಟ್ಟದಲ್ಲಿಯೇ ಇರಬೇಕು, ನೀರಿನ ಅಲೆಗಳಂತೆ. ಆದರೆ ಆಂತರ್ಯದಲ್ಲಿ ನಾವು ಯಾವಾಗಲೂ ಸಮಾಧಾನದಿಂದ ಮತ್ತು ಶಾಂತಿಯಿಂದ ಇರಬೇಕು.

**ಪ್ರ: ಯಾವುದೂ ಆಕಸ್ಮಿಕವಾಗಿ ಸಂಭವಿಸುವುದಿಲ್ಲ ಎಂಬ ಮಾತು ನಿಜವೇ?**

ಉ: ನಮ್ಮ ಜೀವನದಲ್ಲಿ ನಡೆಯುವ ಅನೇಕ ಘಟನೆಗಳು ಖಂಡಿತವಾಗಿಯೂ ಆಕಸ್ಮಿಕವಲ್ಲ. ಉದಾಹರಣೆಗೆ, ಒಬ್ಬ ವ್ಯಕ್ತಿಯನ್ನು ಭೇಟಿ ಮಾಡುವುದಾಗಿರಬಹುದು, ಕೆಲಸವನ್ನು ಆಯ್ಕೆ ಮಾಡಿಕೊಳ್ಳುವುದೇ ಆಗಿರಬಹುದು, ಅಥವಾ ಒಬ್ಬ ಗುರುವನ್ನು ಭೇಟಿ ಮಾಡುವುದಾಗಿರಬಹುದು. ಆದರೆ ನಿಜವಾದ ಅಪಘಾತಗಳೂ ಸಂಭವಿಸುತ್ತವೆ. ಒಂದು ವೇಳೆ ನಾವು ಅಸಡ್ಡೆಯಿಂದ ವಾಹನ ಚಲಿಸಿದರೆ, ಬೇರೊಂದು ವಾಹನಕ್ಕೆ ಡಿಕ್ಕಿ ಹೊಡೆಯುತ್ತೇವೆ. ಆಗ ಅದು ಅಪಘಾತವೇ ಹೊರತು ಪೂರ್ವ ನಿರ್ಧಾರಿತವಾದುದಲ್ಲ. ಆದ್ದರಿಂದ ನಾವು ಈ ರೀತಿ ಹೇಳಬಹುದೇನೋ – ಕೆಲವು ವೇಳೆ ಘಟನೆಗಳು ಆಕಸ್ಮಿಕವಾಗಿರುತ್ತವೆ, ಮತ್ತೆ ಕೆಲವೊಮ್ಮೆ ಆಕಸ್ಮಿಕವಾಗಿರುವುದಿಲ್ಲ.


**ಪ್ರ: ಗಣೇಶ ಹಬ್ಬದ ಸಂದರ್ಭದಲ್ಲಿ, ನಾವು ಹೇಗೆ ಗಣೇಶನಿಂದ ಚೈತನ್ಯಗಳನ್ನು ಸೆಳೆದುಕೊಳ್ಳಬೇಕು?**

ಉ: ನಾನು ಅರ್ಥ ಮಾಡಿಕೊಂಡಿರುವಂತೆ ಮತ್ತು ನನ್ನ ಗಾಢ ನಂಬಿಕೆಯಂತೆ, ನಾವು ಚೈತನ್ಯಗಳನ್ನು ಸೆಳೆದುಕೊಳ್ಳಬೇಕಾಗಿಲ್ಲ. ನಮಗೆ ಚೈತನ್ಯಗಳನ್ನು ನೀಡಲಾಗುತ್ತದೆ. ನಮಗೆ ಅವುಗಳನ್ನು ಸ್ವೀಕರಿಸುವುದು ಗೊತ್ತಿಲ್ಲ. ನಾವು ತೆರೆದುಕೊಳ್ಳುವುದಿಲ್ಲ ಮತ್ತು ನಮ್ಮಲ್ಲಿ ಸಾಕಷ್ಟು ಪ್ರೀತಿಯಿಲ್ಲ. ಚೈತನ್ಯಗಳು ಸಹಜವಾಗಿಯೇ ನಮ್ಮಲ್ಲಿಗೆ ಬರುತ್ತವೆ, ಕೇವಲ ಚೈತನ್ಯಗಳು ಮಾತ್ರವಲ್ಲ, ಅಗಾಧವಾದ ಜ್ಞಾನವೂ ಸಹ ಚೈತನ್ಯಗಳೊಂದಿಗೆ ಬರುತ್ತದೆ. ಆದರೆ ನಿಮಗೆ ಪ್ರಜ್ಞಾಪೂರ್ವಕವಾಗಿ ಚೈತನ್ಯಗಳನ್ನು ಪಡೆಯಬೇಕೆನಿಸಿದರೆ, ಧ್ಯಾನ ಮಾಡಿ ಸಾಕು. ಅಥವಾ ನೀವು ಗಣೇಶನನ್ನು ಒಂದು ಬೃಹದಾಕಾರದ ಬೆಳಕಿನ ಚೆಂಡಿನಂತೆ ಭಾವಿಸಿ. ನೀವು ಒಂದು ಬೆಳಕಿನ ಕಣವಾಗಿ ಆ ಬೆಳಕಿನ ಚೆಂಡನ್ನು ಪ್ರವೇಶಿಸಿ. ಗಣೇಶನನ್ನು ಅನುಭವಿಸಿ; ನೀವು ಅಗಾಧ ಪ್ರಮಾಣದ ಚೈತನ್ಯಗಳನ್ನು ಪಡೆಯುವಿರಿ. ■


### ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 | 200/- |
| Thus Spoke Guruji Krishnananda - Vol 2 | 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

**Published: 21st of Every Month. RNI. No. KARKAN/2003/13739 Regd. Postal Regn. No. KARN/BGE/1124/ 2017-2019**
**Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8**



**ಗುರೂಜಿ ಕೃಷ್ಣಾನಂದ (1939 - 2012)**

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

**ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ**

ನನ್ನ ಹತ್ತಿರದ ಸಂಬಂಧಿಯೊಂದಿಗೆ ನಡೆದ ವಾದವಿವಾದದಿಂದಾಗಿ ನಾನು ಬಹಳ ಬೇಸರಗೊಂಡಿದ್ದೆ. ನಾನು ನಿದ್ರೆ ಮಾಡಲಾರೆನೆಂಬ ಖಾತರಿ ನನಗಿತ್ತು. ಈ ಹಿಂದೆ, ಹೀಗಾದಾಗಲೆಲ್ಲ, ಆ ರಾತ್ರಿ ಮತ್ತು ಮರುದಿನ ಅಸಹನೀಯವಾಗಿರುತ್ತಿದ್ದವು. ಈ ಸಲ ಏನೋ ಒಂದು ಮೋಡಿ ನಡೆಯಿತು, ತಮ್ಮ ಬೆಳಕಿನಿಂದ ನನ್ನನ್ನು ಆವರಿಸುವಂತೆ ಗುರೂಜಿಯವರನ್ನು ಪ್ರಾರ್ಥಿಸಿದೆ. ಕೆಲವೇ ಕ್ಷಣಗಳಲ್ಲಿ ಚಿಕ್ಕ ಮಗುವಿನಂತೆ ನಿದ್ರೆಗೆ ಜಾರಿದೆ ಹಾಗೂ ಮಾರನೆಯ ದಿನ ಬೆಳಿಗ್ಗೆ ಎದ್ದಾಗ ಅತ್ಯಂತ ಹರ್ಷಿತಳಾಗಿ ಪ್ರಶಾಂತವಾಗಿದ್ದೆ.

– ಜಸ್ ಭಾಟಿಯ

ಸಪ್ತರ್ಷಿಗಳ ಗುಹೆಯಲ್ಲಿ ಧ್ಯಾನಮಾಡುತ್ತಿದ್ದಾಗ ನನ್ನ ಮುಂದೆ ಕೆಲವು ನೆರಳುಗಳ ಚಲನೆ ಕಂಡುಬಂದಿತು, ಆದರೆ ಕಣ್ತೆರೆದಾಗ ಗುಹೆಯಲ್ಲಿ ಯಾರೂ ಇರಲಿಲ್ಲ. ಕಣ್ಮುಚ್ಚಿದಾಗ ಅತ್ಯಂತ ಪ್ರಬಲವಾದ ಹಾಗೂ ಆಹ್ಲಾದಕರವಾದ ಚೈತನ್ಯವೊಂದು ಮೇಲಿನಿಂದ ನನ್ನನ್ನು ಪ್ರವೇಶಿಸಿ ನಂತರ ಭೂಮಿಯೊಳಕ್ಕೆ ಹೋಯಿತು. ಕೆಲವು ಕ್ಷಣಗಳ ನಂತರ ಅದೇ ಅನುಭವವಾಯಿತು, ಆದರೆ ಆ ಚೈತನ್ಯದ ತೀವ್ರತೆ ಕಡಿಮೆಯಿತ್ತು. ಅದು ನನಗೆ ಆಶೀರ್ವಾದವೆಂದೆನಿಸಿತು. ಕೆಲವು ದಿನಗಳ ನಂತರ ಅದೇ ಅನುಭವ 'ರಾ' ಮಂದಿರದಲ್ಲಿ (RA temple) ಆಯಿತು.

ತಪೋನಗರಕ್ಕೆ ಇದು ನನ್ನ ಎಂಟನೆಯ ಭೇಟಿಯಾಗಿತ್ತು. ಅದೇಗೋ, ಈ ಭೇಟಿ ತುಂಬಾ ಮುಖ್ಯವಾದುದು ಎಂದು ನನಗನಿಸಿತು, ಏಕೆಂದರೆ 2018ನೇ ಮಾರ್ಚ್ ತಿಂಗಳಿನಿಂದ ಅನಿರೀಕ್ಷಿತವಾಗಿ ಅಗಾಧವಾದ ಪ್ರೀತಿಯು ನನ್ನ ಹೃದಯದೊಳಗೆ ಕಂಪಿಸುತ್ತಿರುವುದರ ಅನುಭವವಾಗುತ್ತಿದೆ.

– ರೊಲ್ಯಾಂಡ್ ಫೆಫ್ಲಿಂಗರ್

ನನ್ನ ಧ್ಯಾನ ನಿಜವಾಗಿಯೂ ತೀವ್ರಗೊಂಡಿದೆ, ಅದು ಆಳವಾಗಿ, ನಿಶ್ಚಲತೆಯಿಂದ ಹಾಗೂ ತಲ್ಲೀನತೆಯಿಂದ ಕೂಡಿದೆ. 2018ರ ಮೇ ತಿಂಗಳಿನ ಓರಿಯೆಂಟೇಷನ್ ತರಗತಿಯ ನಂತರ ಈ ಬದಲಾವಣೆಗಳಾಗುತ್ತಿರುವುದನ್ನು ನಾನು ಗಮನಿಸಿದ್ದೇನೆ. ಅನೇಕ ಸಲ, ದಿನದ ಬಹುತೇಕ ಸಮಯದಲ್ಲಿ, ಅತ್ಯಂತ ಶಾಂತಿ ಸಮಾಧಾನದಿಂದಿದ್ದು ಆಲೋಚನೆಗಳೇ ಇಲ್ಲದ ಸಮಾಧಿಯಂತಹ ಸ್ಥಿತಿಯಲ್ಲಿರುತ್ತೇನೆ. ನನ್ನ ಈ ಅನುಭವವನ್ನು ಸಹಜ ಸ್ಥಿತಿಯಲ್ಲಿ ಬದುಕುವ ಅನುಭವವೆಂದು ವರ್ಣಿಸಬಹುದು. ಯಾವುದೇ ಕೆಲಸ ಮಾಡಲು ಅಥವ ಏನನ್ನಾದರೂ ಸಾಧಿಸಲು, ಅದರ ಹಿಂದೆ ಓಡುವ ಪ್ರಚೋದನೆ ಇಲ್ಲದೆ, ಸಮಾಧಾನದಿಂದ ಸಹಜವಾಗಿ ಇರುತ್ತೇನೆ.

– ವಿದ್ಯಾವೀರ್ಕರ್

ಓರಿಯೆಂಟೇಷನ್ ತರಗತಿಯಲ್ಲಿ ಏಕತೆಯ (Oneness) ತಂತ್ರವನ್ನು ಅಭ್ಯಾಸಮಾಡುತ್ತಿದ್ದಾಗ, ನಾನು ಒಂದು ಪ್ರಕಾಶಮಾನವಾದ ಬಿಳಿಯ ಬೆಳಕಾಗಿ ವಿಸ್ತಾರಗೊಂಡಂತೆ ಅನುಭವವಾಯಿತು. ಒಂದು ಪ್ರಕಾಶಮಾನವಾದ ಬೆಳಕಿನ ಶ್ರೇಣಿಯೊಂದು ನನ್ನೊಳಗೆ ಪ್ರವೇಶಿಸಿತು, ನಂತರ ನಾನು ಇನ್ನೂ ಪ್ರಕಾಶಗೊಳ್ಳುತ್ತಾ ಮತ್ತು ಕೊನೆಯೇ ಇಲ್ಲದಂತೆ ವಿಸ್ತಾರಗೊಳ್ಳುತ್ತಾ ಹೋದಂತೆನಿಸಿತು. ಜಯಂತ್ ಸರ್ ನಮಗೆ ಕಣ್ಣು ತೆರೆಯಲು ಹೇಳಿದಾಗಲೂ ನನಗೆ ಕಣ್ಣು ತೆರೆಯುವ ಮನಸ್ಸಾಗಲಿಲ್ಲ. ನಂತರದ ಕೆಲವು ದಿನಗಳಲ್ಲೂ ನಾನು ಶಾಂತಳಾಗಿದ್ದೆ. ಋಷಿಗಳಿಗೆ ಮತ್ತು ಗುರೂಜಿಯವರಿಗೆ ನಾನು ಕೃತಜ್ಞಳಾಗಿದ್ದೇನೆ. ಇದನ್ನು ಸಾಧ್ಯಗೊಳಿಸಿದ ಜಯಂತ್ ಸರ್ ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

– ಸುಜಾತ ರಾಮರಾವ್

ಮೇ 27ರಂದು ತಪೋನಗರದ ಭಾನುವಾರದ ತರಗತಿಯನ್ನು ವೆಬ್‌ಕಾಸ್ಟ್ ಮೂಲಕ ನೋಡುತ್ತಿದ್ದೆ. 'ಬೆಳಕಿನ ಸಾಗರವನ್ನು ಅನುಭವಿಸುವ ಅಭ್ಯಾಸ' ನನಗೆ ಸಂತೋಷ ತಂದಿತು. ನಾನು ಬೆಳಕಿನ ಸಾಗರವನ್ನು ಪ್ರವೇಶಿಸಿದಾಗ ಬೆಳಕಿನಲ್ಲಿ ನಾನೇ ಲೀನವಾದೆನೇನೋ ಎನ್ನುವಂತಹ ಅನುಭವವಾಯಿತು ಹಾಗೂ ಕೆಲವು ಗಂಟೆಗಳ ಕಾಲ ಅದೇ ಸ್ಥಿತಿಯಲ್ಲಿದ್ದೆ. ನನ್ನಲ್ಲಿದ್ದ ನೀಲಿ ಬೆಳಕು, ನೀಲಿ ಬೆಳಕಿನ ಸಾಗರದೊಂದಿಗೆ ಲೀನವಾದಂತೆನಿಸಿತು.

– ಗೀತಿಕಾ ಮೆಹ್ರೋತ್ರ

ನಾವು ಮನೆಯನ್ನು ಬದಲಾಯಿಸಬೇಕಾಗಿ ಬಂತು, ಆದರೆ ನಮ್ಮ ಎರಡನೆಯ ಮಗುವಿನ ಹೆರಿಗೆಗೆ ವೈದ್ಯರು ಸಿಕ್ಕಿರಲಿಲ್ಲವಾಗಿ ನಾವು ಚಿಂತೆಗೊಳಗಾದೆವು. ಏಪ್ರಿಲ್ 27ರಂದು ರಾತ್ರಿ ಮಲಗುವುದಕ್ಕೆ ಮೊದಲು 'ಬೆಳಕಿನ ಸಾಗರವನ್ನು ಅನುಭವಿಸುವ ಅಭ್ಯಾಸ'ವನ್ನು ಮಾಡಿದೆವು. ಸೂಕ್ಷ್ಮ ಮಟ್ಟದ ಅನುಭವದಲ್ಲಿ ದೇವ ಹನುಮಂತನು ನನ್ನನ್ನು ಒಬ್ಬ ದಿವ್ಯ ಪುರುಷನ ಬಳಿಗೆ ಕರೆದೊಯ್ದನು, ಆ ದಿವ್ಯ ಪುರುಷ ಶ್ರೀಮನ್ನಾನಾರಾಯಣನೆಂದೆನಿಸಿತು. ಅವನು ನನ್ನ ಕೈ ಹಿಡಿದು, "ನಾನು ನಿನಗೆ ಮಗುವೊಂದನ್ನು ಕೊಡುತ್ತಿರುವಾಗ, ಅದರ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುವುದಿಲ್ಲವೇ? ಸಮಾಧಾನದಿಂದಿರು," ಎಂದು ಹೇಳಿದನು. ಕಣ್ತೆರೆದಾಗ ಕಣ್ಣೀರು ಹರಿದುಬಂತು. ನನ್ನ ಚಿಂತೆಯನ್ನು ನಿವಾರಿಸಲು ಸ್ವತಃ ಭಗವಂತನೇ ಬಂದಿದ್ದ! ಆ ದಿನದಿಂದ ನಾನು ಯಾವುದಕ್ಕೂ ಚಿಂತೆಮಾಡುತ್ತಿಲ್ಲ. ಬೆಳಕಿನ ಸಾಗರ ನನಗೆ ಶಾಂತಿಯನ್ನು ಕೊಟ್ಟಿದೆ. ಮೇ 24ರಂದು ನಮಗೆ ಹೆಣ್ಣು ಮಗು ಜನಿಸಿತು. ಗುರೂಜಿಯವರಿಗೆ, ಅಮರರವರಿಗೆ ಮತ್ತು ಋಷಿಗಳಿಗೆ ನಮ್ಮ ಕೃತಜ್ಞತೆಗಳನ್ನರ್ಪಿಸುತ್ತೇವೆ.

– ಸಾಧಕ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ